ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಆಗಸ್ಟ್ 25, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 103 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

TATA ಉತ್ಪಾದನೆ

TANISHQ PRESENTS aarna

ಪ್ರತಿಯೊಂದು ವರವು ನಿಮ್ಮಿಂದ ಬರುತ್ತದೆ.
ಪ್ರತಿಯೊಂದು ವರವು ನಿಮ್ಮಿಂದ ಅನುಗ್ರಹಿಸಲ್ಪಡುತ್ತದೆ.
ಅದಕೋಸ್ಕರ ನೀವು ನಮ್ಮ ಬದುಕಿನ ಅದೃಷ್ಟವಾಗಿರುತ್ತೀರಿ.

ವರಮಹಾಲಕ್ಷ್ಮಿ ಹಬ್ಬದ ಶುಭಾಶಯಗಳು

UP TO 20% ವರೆಗೆ ಕಡಿತ*
ವಜ್ರಾಭರಣದ ಮೌಲ್ಯದ ಮೇಲೆ

TANISHQ ಎಕ್ಸ್‌ಚೇಂಜ್
ಜಾಣ ಆಯ್ಕೆ ಮಾಡಿ



ಶೋರೂಮ್: ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ. ದೂ.ಸಂ: 63647 95111

## ಹೈಕೋರ್ಟ್ ಜಡ್ಜ್‌ಗಳಲ್ಲಿ ಮೇಲ್ಜಾತಿಯವರೇ ಹೆಚ್ಚು

### ಹಿಂದುಳಿದ ವರ್ಗಗಳ ಜಡ್ಜ್‌ಗಳ ನೇಮಕ ಕಡಿಮೆ : ನಿ.ನ್ಯಾಯಮೂರ್ತಿ ನಾಗಮೋಹನದಾಸ್



ದಾವಣಗೆರೆ, ಆ. 24 - ಕಳೆದ ಐದು ವರ್ಷಗಳಲ್ಲಿ ದೇಶದ ಹೈಕೋರ್ಟ್‌ಗಳಿಗೆ ನೇಮಕಗೊಂಡ 604 ನ್ಯಾಯಮೂರ್ತಿಗಳಲ್ಲಿ 458 ನ್ಯಾಯಮೂರ್ತಿಗಳು ಮೇಲ್ಜಾತಿ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದಾರೆ. ಹೀಗಿರುವಾಗ ದೇಶದ ಉನ್ನತ ನ್ಯಾಯಾಲಯ ಭಾರತದ ಪ್ರತಿಬಿಂಬವಾಗಲು ಸಾಧ್ಯವೇ? ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನದಾಸ್ ಪ್ರಶ್ನಿಸಿದ್ದಾರೆ.

ಜಿಲ್ಲಾ ವಕೀಲರ ಸಂಘ ಹಾಗೂ ಆರ್.ಎಲ್. ಕಾನೂನು ಕಾಲೇಜುಗಳ ವತಿಯಿಂದ ನಗರದ ವಕೀಲರ ಭವನದಲ್ಲಿ 'ಯುವ ವಕೀಲರ ಮುಂದಿರುವ ಸವಾಲುಗಳು' ಎಂಬ ವಿಷಯ ಕುರಿತು ಆಯೋಜಿಸಲಾಗಿದ್ದ ಉಪನ್ಯಾಸ ಮಾಲಿಕೆಯ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಮೊನ್ನೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಮಾತನಾಡುತ್ತಾ, ಸುಪ್ರೀಂ ಕೋರ್ಟ್ ಭಾರತದ ವೈವಿಧ್ಯತೆ ಬಿಂಬಿಸುತ್ತದೆ. ಇಲ್ಲಿ ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳದ ನ್ಯಾಯಮೂರ್ತಿಗಳು ಒಂದು ಪೀಠದಲ್ಲಿ ಸದಸ್ಯರಾಗಿ ಹರಿಯಾಣದ ವಿಷಯ ನಿರ್ಧರಿಸುತ್ತಾರೆ ಎಂದು ಹೇಳಿದ್ದರು. ಇದು ನಿಜ. ಆದರೆ, ಉನ್ನತ ನ್ಯಾಯಾಂಗ ನಿಜವಾಗಿಯೂ ಭಾರತವನ್ನು ಪ್ರತಿಬಿಂಬಿಸುತ್ತಿದೆಯೇ? ಎಂದು ನಾಗಮೋಹನದಾಸ್ ಪ್ರಶ್ನಿಸಿದರು.

2018ರಿಂದ ಮಾರ್ಚ್ 2023ರ ನಡುವಿನ ಅವಧಿಯಲ್ಲಿ ದೇಶದ ವಿವಿಧ ಹೈಕೋರ್ಟ್‌ಗಳಿಗೆ 604 ನ್ಯಾಯಮೂರ್ತಿಗಳು ನೇಮಕಗೊಂಡಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಯ 18, ಪರಿಶಿಷ್ಟ ಪಂಗಡದ ಒಂಭತ್ತು, ಇತರೆ ಹಿಂದುಳಿದ ವರ್ಗಗಳ 72 ಹಾಗೂ ಅಲ್ಪಸಂಖ್ಯಾತ ಸಮುದಾಯದ ಕೇವಲ 34 ನ್ಯಾಯಮೂರ್ತಿಗಳಿದ್ದಾರೆ ಎಂದವರು ಹೇಳಿದರು.

604ರಲ್ಲಿ ಕೆಲವೇ ಜಾತಿಯ (2ನೇ ಪುಟಕ್ಕೆ)

### ಸೌಜನ್ಯ ಪ್ರಕರಣದ ಚರ್ಚೆ ಏಕಿಲ್ಲ?

**ಸೌಜನ್ಯ ಹತ್ಯೆ ಪ್ರಕರಣದ ಮರು ತನಿಖೆಗಾಗಿ ಅವರ ಕುಟುಂಬದವರು ಒತ್ತಾಯಿಸುತ್ತಿದ್ದಾರೆ. ಆದರೆ, ಇಂತಹ ಪ್ರಮುಖ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ವಕೀಲರ ಸಂಘದಲ್ಲಿ ಚರ್ಚೆಗಳು ನಡೆದಿಲ್ಲ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ವಿಷಾದಿಸಿದರು.**
**ಅಮೆರಿಕದಲ್ಲಿ 1944ರಲ್ಲಿ ಇಬ್ಬರು ಬಿಳಿಯರ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣದಲ್ಲಿ** (2ನೇ ಪುಟಕ್ಕೆ)

## ಯುರಿಯಾ ದುರ್ಬಳಕೆ ತಡೆಗೆ ಯೋಜನೆ

ನವದೆಹಲಿ, ಆ. 24 - ಸಬ್ಸಿಡಿ ಯುರಿಯಾವನ್ನು ಪ್ಲೈವುಡ್ ಹಾಗೂ ಇತರೆ ಉದ್ಯಮಗಳು ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯಲು ಕೇಂದ್ರ ಸರ್ಕಾರ ಸಮಗ್ರ ಯೋಜನೆ ರೂಪಿಸಿದೆ. ಇದರ ಅನ್ವಯ ತಪ್ಪು ಮಾಡಿದವರಿಗೆ ಜೈಲು ಶಿಕ್ಷೆಯನ್ನೂ ವಿಧಿಸ ಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವಾಲಯವು ಈ ದಿಸೆಯಲ್ಲಿ ಇತರೆ ಸಚಿವಾಲಯಗಳು ಮತ್ತು ರಾಜ್ಯಗಳ ಜೊತೆಗೂಡಿ ಕಾರ್ಯ ನಿರ್ವಹಿಸಲು ಉದ್ದೇಶಿಸಿದೆ. ಕೃಷಿ ದರ್ಜೆಯ ಯುರಿಯಾ ದುರ್ಬಳಕೆ ತಡೆಯಲು ಜಂಟಿ ಕಾರ್ಯಾಚರಣೆಗಳನ್ನು ಕೈಗೊಳ್ಳಲಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರ ಸರ್ಕಾರ ರೈತರಿಗೆ ಬೇವು ಲೇಪಿತ ಯುರಿಯಾ ಅನ್ನು 45 ಕೆ.ಜಿ. ಚೀಲಕ್ಕೆ 266 ರೂ. ದರದಲ್ಲಿ ಮಾರುತ್ತಿದೆ. ಇದು ಕೈಗಾರಿಕಾ ದರ್ಜೆಯ ಯುರಿಯಾಗಿಂತ ಸಾಕಷ್ಟು ಕಡಿಮೆ ದರದ್ದಾಗಿದೆ.

ಕೃಷಿ ಯುರಿಯಾ ಅನ್ನು ಪ್ಲೈವುಡ್, ಗಣಿ ಸ್ಫೋಟಕ, ಅಂಟು ಸೇರಿದಂತೆ ಹಲವು ಉದ್ಯಮಗಳಿಗೆ ಬಳಸುವುದು ಕಂಡು ಬಂದಿದೆ.

ಯುರಿಯಾ ದುರ್ಬಳಕೆ ತಡೆಗಾಗಿ ಸಮಗ್ರ ಕ್ರಿಯಾ ಯೋಜನೆ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಕೃಷಿ ದರ್ಜೆಯ ಯುರಿಯಾ ಅನ್ನು ಕೈಗಾರಿಕೆಗಳಿಗೆ ಬಳಸುವುದರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

ಕೃಷಿ ಯುರಿಯಾ ಅನ್ನು ಕೈಗಾರಿಕೆಗೆ ಬಳಸುವುದನ್ನು ತಡೆಯಲು ಬೇವಿನ ಲೇಪನ ಮಾಡಲಾಗುತ್ತಿದೆ. ಆದರೆ, ಕೆಲ ರಸಾಯನಿಕ ಪ್ರಕ್ರಿಯೆಗಳ ಮೂಲಕ ಬೇವಿನ ಲೇಪನ ತೆಗೆಯಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

## ಕೈ ಸೇರುವವರಿಗೆ ಸ್ಥಾನಮಾನದ ಭರವಸೆ ಇಲ್ಲ: ಡಿಕೆಶಿ ಸ್ಪಷ್ಟನೆ



ಬೆಂಗಳೂರು, ಆ. 24 - ಬಿಜೆಪಿ, ಜೆಡಿಎಸ್ ತೊರೆದು ಪಕ್ಷ ಸೇರುವ ಶಾಸಕರು ಮತ್ತು ಮುಖಂಡರಿಗೆ ಯಾವುದೇ ಸ್ಥಾನಮಾನದ ಭರವಸೆ ಇಲ್ಲ ಎಂದು ಉಪ ಮುಖ್ಯಮಂತ್ರಿ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ನಮ್ಮಿಂದ ದೂರ ಸರಿದವರು ಮತ್ತು ನಮ್ಮ ಸಂಘಟನೆಯ ಶಕ್ತಿಯನ್ನು ನೆಚ್ಚಿ ಹಲವಷ್ಟು ಮಂದಿ ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ (4ನೇ ಪುಟಕ್ಕೆ)

## ಖಾತ್ರಿ ಆಧಾರ್ ಜೋಡಣೆ ಗಡುವು ವಿಸ್ತರಣೆಯಿಲ್ಲ

ನವದೆಹಲಿ, ಆ. 24 - ಉದ್ಯೋಗ ಖಾತ್ರಿ ಯೋಜನೆಗೆ ಆಧಾರ್ ಪಾವತಿ ವ್ಯವಸ್ಥೆ ಕಡ್ಡಾಯಗೊಳಿಸುವ ಆಗಸ್ಟ್ 31ರ ಗಡುವು ವಿಸ್ತರಿಸುವುದಿಲ್ಲ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಯನ್ನು ಆಧಾರ್ ಪಾವತಿ ವ್ಯವಸ್ಥೆ (ಎ.ಬಿ.ಪಿ.ಎಸ್.) ಮೂಲಕ (4ನೇ ಪುಟಕ್ಕೆ)



## ವರಮಹಾಲಕ್ಷ್ಮಿ ಹಬ್ಬದ ಸಂಭ್ರಮಕ್ಕೆ ಖರೀದಿ

ದಾವಣಗೆರೆ, ಆ. 24- ಇಂದು ಶ್ರಾವಣ ಮಾಸದ ಶುಕ್ರವಾರ ಆಚರಿಸಲಾಗುವ ವರಮಹಾಲಕ್ಷ್ಮಿ ಹಬ್ಬದ ಸಂಭ್ರಮಕ್ಕೆ ಜನರು ಅಗತ್ಯ ವಸ್ತುಗಳ ಖರೀದಿಯಲ್ಲಿ ತೊಡಗಿಕೊಂಡಿದ್ದರು.

ನಗರದ ಗಡಿಯಾರ ಕಂಬ, ಕೆ.ಆರ್. ಮಾರುಕಟ್ಟೆ, ಪಿ.ಬಿ. ರಸ್ತೆ ಸೇರಿದಂತೆ ಮುಂತಾದ ಕಡೆ ಬೆಲೆ ಏರಿಕೆಯ ನಡುವೆಯೂ ಖರೀದಿಯ ಭರಾಟೆ ಹೆಚ್ಚಾಗಿತ್ತು. ಈ ಬಾರಿ ಬಾಳೆ ಹಣ್ಣಿನ ದರ ಹೆಚ್ಚಾಗಿರುವುದು ಜನತೆಗೆ ನುಂಗಲಾರದ ತುತ್ತಾಗಿದೆ. ಜೊತೆಗೆ ಹಣ್ಣು, ಹೂವಿನ ದರ ಏರಿಕೆಗೆ ಲಕ್ಷ್ಮೀ ಭಕ್ತರು ಹೈರಾಣಾಗಿದ್ದಾರೆ. ಆದಾಗ್ಯೂ ಸಂಭ್ರಮದ ಹಬ್ಬಕ್ಕೆ ಸಜ್ಜಾಗಿದ್ದಾರೆ.

## 1,964 ಕೋಟಿ ರೂ. ವಂಚನೆ : ವಿಸಾ ಪವರ್ ವಿರುದ್ಧ ಎಫ್.ಐ.ಆರ್.

ನವದೆಹಲಿ, ಆ. 24 - 1,964 ಕೋಟಿ ರೂ.ಗಳ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಸಾ ಪವರ್ ಕಂಪನಿ ಹಾಗೂ ಅದರ ಮಾಜಿ ಅಧ್ಯಕ್ಷ ವಿಶಂಭರ್ ಶರಣ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ ಸೇರಿದಂತೆ 14 ಬ್ಯಾಂಕುಗಳ ಕೂಟದಿಂದ ಸಾಲ ನೀಡಲಾಗಿತ್ತು. ಪಂಜಾಬ್ ನ್ಯಾಷನಲ್ ಬ್ಯಾಂಕ್ ನೀಡಿದ ದೂರನ್ನು ಆಧರಿಸಿ ಸಿ.ಬಿ.ಐ. ಕ್ರಮ ತೆಗೆದುಕೊಂಡಿದೆ.

ಛತ್ತೀಸ್‌ಘಡದ ರಾಯಘಡದಲ್ಲಿ ಕಲ್ಲಿದ್ದಲು ಆಧರಿತ ಶಾಖೋತ್ಪನ್ನ ವಿದ್ಯುತ್ ಘಟಕ ಸ್ಥಾಪಿಸಲು ಕಂಪನಿ ಸಾಲ ಪಡೆದಿತ್ತು. ಆದರೆ, ಆರೋಪಿಗಳು ಸಂಚು ನಡೆಸಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ಇದರಿಂದಾಗಿ ಬ್ಯಾಂಕುಗಳಿಗೆ ನಷ್ಟವಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

Quick
Quicker
Ather

Shruti Ather
Dealer for : Ather Energy Pvt. Ltd.,

The new Ather 450 Series
Starts at ₹ 129 999



"In the last 4 or 5 years, we have hardly faced any issues and that is one of the big reasons why it sits at the very top of our recommendation list.
"Varun Painter -Powerdrift"
- Aug 11 2023"

"Its Zippy and fun to ride, its slick, smart and intelligent E-Scooter and its an honest product, its always delivered on all its promises and all these traits are the reason why even though its expensive, it presents good value.
"Autocar Professional"
- Aug 11 2023"

Ather Experience Centre, Devaraj Urs Layout 'A' Block, P.B. Road, Davangere - 577 006.

Phone : 963 400 8229

## ಸಕ್ಕರೆ ಉತ್ಪಾದನೆಯಲ್ಲಿ ಇಳಿಕೆ ಸಕ್ಕರೆ ರಫ್ತು ನಿಷೇಧ ಸಾಧ್ಯತೆ?

ಔರಂಗಾಬಾದ್, ಆ. 24 - ಮಳೆ ಕೊರತೆಯಿಂದಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ ಸಕ್ಕರೆ ಉತ್ಪಾದನೆ ಕಡಿಮೆಯಾಗಬಹುದು ಎಂದು ಸಹಕಾರಿ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ತಿಳಿಸಿದೆ.

ದೇಶೀಯ ಬೇಡಿಕೆ ಈಡೇರಿಸುವ ಸಲುವಾಗಿ ಸಕ್ಕರೆ ರಫ್ತಿನ ಮೇಲೆ ನಿಷೇಧ ಹೇರುವ ಸಾಧ್ಯತೆ ಇದೆ ಎಂದು ಒಕ್ಕೂಟದ ಅಧ್ಯಕ್ಷ ಜೈಪ್ರಕಾಶ್ ದಂಡೇಗಾಂವಕರ್ ಹೇಳಿದ್ದಾರೆ.

ಈ ವರ್ಷ 330 ಲಕ್ಷ ಟನ್ ಸಕ್ಕರೆ ಉತ್ಪಾದನೆಯ ನಿರೀಕ್ಷೆ ಇತ್ತು. ಆದರೆ, ಇಳುವರಿ ಕುಂಠಿತವಾಗಲಿದೆ. ಪ್ರಸಕ್ತ ದೇಶದಲ್ಲಿ 65 ಲಕ್ಷ ಟನ್ (5ನೇ ಪುಟಕ್ಕೆ)


## ಸೂಳೆಕೆರೆ ವೀಕ್ಷಣೆ ನಡೆಸಿದ ಶಾಸಕ ಬಸವಂತಪ್ಪ



ಚನ್ನಗಿರಿ, ಆ. 24 - ತಾಲ್ಲೂಕಿನ ಐತಿಹಾಸಿಕ ಸ್ಥಳವಾಗಿರುವ ಸೂಳೆಕೆರೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಬ್ರಾಂದಿ, ಬೀರು ಬಾಟಲಿ ಹಾಗೂ ಇಸ್ಪೀಟ್ ಎಲೆಗಳ ತಾಣವಾಗಿ ಮಾರ್ಪಟ್ಟಿದ್ದು, ಸೂಳೆಕೆರೆ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಇಲ್ಲಿನ ಸ್ವಚ್ಛತೆ ಕಾಪಾಡುವಲ್ಲಿ ವಿಫಲವಾಗಿರುವುದನ್ನು ಕಂಡು ಬೇಸರ ವ್ಯಕ್ತಪಡಿಸಿದರು.

ಗುರುವಾರ ಅಧಿಕಾರಿಗಳೊಂದಿಗೆ ಜಾಕ್‌ವೆಲ್ 6 ಕ್ಕೆ ಬೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೂಳೆಕೆರೆ ನೀರನ್ನು ಲಕ್ಷಾಂತರ ಜನರು ಕುಡಿಯುತ್ತಿದ್ದಾರೆ. ಜಮೀನುಗಳು ಸಹ ಸೂಳೆಕೆರೆ ನೀರನ್ನು ಅವಲಂಭಿಸಿವೆ. ಇತ್ತೀಚಿಗೆ ನಡೆದ ಚಿತ್ರದುರ್ಗದ ಕವಾಡಿಗರಹಟ್ಟಿಯ ದುರಂತಕ್ಕೆ ಸಾಕ್ಷಿಯೆಂಬಂತೆ ಇಲ್ಲಿ ಯಾವುದೇ ಅನಾಹುತಗಳು (4ನೇ ಪುಟಕ್ಕೆ)

## ಉದ್ದೇಶಿತ ಸ್ಥಳಕ್ಕೆ ಇಳಿದ ಲ್ಯಾಂಡರ್



ಬೆಂಗಳೂರು, ಆ. 24 - ಚಂದ್ರಯಾನ - 3ರ ಲ್ಯಾಂಡರ್ ವಿಕ್ರಮ್ ಗುರುತಿಸಲಾಗಿದ್ದ ವ್ಯಾಪ್ತಿಯಲ್ಲೇ ಇಳಿದಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

ಲ್ಯಾಂಡರ್ ಇಳಿಸಲು 4.5 ಕಿ.ಮೀ. x 2.5 ಕಿ.ಮೀ. ಪ್ರದೇಶವನ್ನು ಗುರುತಿಸಲಾಗಿತ್ತು. ಈ ಜಾಗದ ಕೇಂದ್ರದಿಂದ 300 ಮೀಟರ್ ದೂರದಲ್ಲೇ ಲ್ಯಾಂಡರ್ ಇಳಿದಿದೆ ಎಂದು ಸೋಮನಾಥ್ ಹೇಳಿದ್ದಾರೆ. ಲ್ಯಾಂಡರ್‌ನಲ್ಲಿದ್ದ ರೋವರ್ ಚಟುವಟಿಕೆ ಆರಂಭಿಸಿದೆ. ಅದು ಉತ್ತಮವಾಗಿ ಕೆಲಸ ಮಾಡು ತ್ತಿದೆ. ರೋವರ್‌ನಲ್ಲಿ 2 ಹಾಗೂ ಲ್ಯಾಂಡರ್‌ನಲ್ಲಿ ಮೂರು ಪ್ರಯೋಗದ ಉಪಕರಣಗಳಿವೆ. ಸರಣಿಯಲ್ಲಿ ಅವುಗಳ ಕಾರ್ಯಾರಂಭ ಮಾಡಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

## 14 ದಿನಗಳ ನಂತರವೂ ಲ್ಯಾಂಡರ್ ಉಳಿಯಲಿದೆಯೇ?

ಬೆಂಗಳೂರು, ಆ. 24 - ಚಂದ್ರಯಾನ -3 ಯಶಸ್ಸು ಕಂಡ ನಂತರ, ಇಸ್ರೋ ಹೆಚ್ಚು ದಿನಗಳ ಕಾಲ ಪ್ರಯೋಗ ನಡೆಸಲು ಆಶಿಸಿದೆ. ಚಂದ್ರಯಾನದಲ್ಲಿರುವ ಲ್ಯಾಂಡರ್ ಹಾಗೂ ರೋವರ್‌ಗಳು ಒಂದು ಚಂದ್ರ ದಿನ ಅಥವಾ ಭೂಮಿಯ 14 ದಿನಗಳು ಮಾತ್ರ ಕಾರ್ಯನಿರ್ವಹಿಸಲು ಸಾಧ್ಯವಾಗಲಿದೆ. ಇದಾದ ನಂತರ ಚಂದ್ರನಲ್ಲಿ ತೀವ್ರ ಚಳಿ ಹಾಗೂ ಕತ್ತಲು ಆವರಿಸುತ್ತದೆ. ಚಂದ್ರನ ಬೆಳಕಿರುವವರೆಗೆ ಲ್ಯಾಂಡರ್ ಹಾಗೂ ರೋವರ್‌ನ ವ್ಯವಸ್ಥೆಗಳಿಗೆ ವಿತದ್ಯುತ್ ಲಭ್ಯವಾಗುತ್ತದೆ. ಸೂರ್ಯ ಮುಳುಗಿದ ನಂತರ ತಾಪಮಾನ ಶೂನ್ಯಕ್ಕಿಂತ 180 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುತ್ತದೆ. ಈ ತಾಪಮಾನದಲ್ಲಿ ಯಾವುದೇ ವ್ಯವಸ್ಥೆ ಉಳಿಯುವುದಿಲ್ಲ. ಹಾಗೇನಾದರೂ ಉಳಿದರೆ ಆ ವ್ಯವಸ್ಥೆಯಲ್ಲಿ ಕೆಲಸ ಮಾಡಲು ಸಂತೋಷವಾಗುತ್ತದೆ. ಆ ರೀತಿ ಆಗಲಿ ಎಂದು ಆಶಿಸುವುದಾಗಿ ಇಸ್ರೋ ಅಧ್ಯಕ್ಷ ಸೋಮನಾಥ್ ಹೇಳಿದ್ದಾರೆ.

# ಸರ್ಕಾರದ ಯೋಜನೆಗಳನ್ನು ಬಡವರಿಗೆ ತಲುಪಿಸುವ ಕೆಲಸ ಮಾಡಿ

## ಹಾಲಿವಾಣದ ಅಭಿನಂದನಾ ಸಮಾರಂಭದಲ್ಲಿ ಮಾಜಿ ಶಾಸಕ ಎಸ್.ರಾಮಪ್ಪ ಮನವಿ



ಮಲೇಬೆನ್ನೂರು, ಆ.24- ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪುವಂತೆ ಮಾಡಲು ಕಾಂಗ್ರೆಸ್ ಕಾರ್ಯಕರ್ತರು ಶ್ರಮಿಸಬೇಕೆಂದು ಮಾಜಿ ಶಾಸಕ ಎಸ್.ರಾಮಪ್ಪ ಹೇಳಿದರು.

ಹಾಲಿವಾಣ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸಮುದಾಯ ಭವನದಲ್ಲಿ ಹಾಲಿವಾಣ ಗ್ರಾ.ಂ. ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು - ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಮತ್ತು ಮತದಾರರಿಗೆ ಇಂದು ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳು ಎಲ್ಲಾ ಜನರಿಗೆ ಸುಲಭವಾಗಿ ಸಿಗುವಂತೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಈ ವರ್ಷ ಅಭಿವೃದ್ಧಿಗೆ ನಿರೀಕ್ಷೆ ಮಾಡಿದಷ್ಟು ಅನುದಾನ ಸಿಗುವುದು ಕಷ್ಟವಾಗುತ್ತದೆ. ಮುಂದಿನ ವರ್ಷದಿಂದ ಅಭಿವೃದ್ಧಿಗೆ ಹೆಚ್ಚಿನ ಒತ್ತು ಸಿಗಲಿದೆ ಎಂದು ರಾಮಪ್ಪ ಹೇಳಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಚುನಾಯಿತ ಜನಪ್ರತಿನಿಧಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಜನರಿಗೆ ಮೂಲಭೂತ ಸೌಲಭ್ಯ ಒದಗಿಸಲು ಒತ್ತು ನೀಡಬೇಕು. ಸರ್ಕಾರದಿಂದ ಆಗುವ ಕೆಲಸಗಳನ್ನು ನಾನು ಮಾಡಿಸಿಕೊಡುತ್ತೇನೆಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಕಾಂಗ್ರೆಸ್ ಮುಖಂಡ ಹಾಗೂ ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ.ಪರಮೇಶ್ವರಪ್ಪ ಮಾತನಾಡಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿದೇವಿ ಎಸ್.ಜಿ. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಕಾಂಗ್ರೆಸ್ ಓಬಿಸಿ ಅಧ್ಯಕ್ಷ ಕೆ.ಪಿ.ಗಂಗಾಧರ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಪುರಸಭೆ ಮಾಜಿ ಸದಸ್ಯ ಎ.ಆರೀಫ್ ಅಲಿ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್, ಮಲೇಬೆನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿಕುಮಾರ್, ಹೋಟೆಲ್ ಪರಮೇಶ್ವರಪ್ಪ, ಕೊಪ್ಪದ ಮಲ್ಲಪ್ಪ, ಗ್ರಾ.ಪಂ.ಮಾಜಿ ಅಧ್ಯಕ್ಷ ಡಿ.ಡಿ.ಚಿಕ್ಕಣ್ಣ, ಎಸ್.ಎಂ.ಮಂಜುನಾಥ್, ಎಸ್. ಜಿ.ಸಿದ್ದಪ್ಪ, ಹರಲೀಪುರದ ಮಹಾದೇವಪ್ಪ, ವಕೀಲ ಜಿ.ಹೆಚ್.ಬಸವರಾಜ್, ಕೆ.ಪಿ.ಕುಮಾರಸ್ವಾಮಿ, ಸಿದ್ದಯ್ಯ ಸ್ವಾಮಿ, ಎಸ್.ಜಿ.ಹಾಲೇಶಪ್ಪ, ಟಿ.ತಿಪ್ಪೇಶ್, ಟಿ. ಯೋಗೇಶ್, ಎ.ಕೆ.ಹನುಮಂತಪ್ಪ, ಬಿ.ಮಂಜಪ್ಪ, ಪೂಲೇಪ್ಪ ಶ್ರೇಷ್ಠಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಈ ವೇಳೆ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಪರಮೇಶ್ವರನಾಯ್ಕ ಕಾಂಗ್ರೆಸ್ ಸೇರ್ಪಡೆಯಾದರು.

ಗ್ರಾ.ಪಂ. ಉಪಾಧ್ಯಕ್ಷೆ ಕಮಲಾಬಾಯಿ, ಹಾ.ಉ.ಸ. ಸಂಘದ ಅಧ್ಯಕ್ಷ ಡಿ.ಜಿ.ರಾಘವೇಂದ್ರ, ಉಪಾಧ್ಯಕ್ಷ ಗಂಗಾಮತ ಭರ್ಮಪ್ಪ, ಪಿಎಸಿಎಸ್ ಅಧ್ಯಕ್ಷ ಎಸ್.ಬಿ. ಕರಿಯಪ್ಪ, ಉಪಾಧ್ಯಕ್ಷ ಜೋಗಳ್ಳಿ ಕೃಷ್ಣಪ್ಪ ಹಾಗೂ ಎಲ್ಲಾ ಸದಸ್ಯರು ಮತ್ತು ಹರಳಹಳ್ಳಿ ಗ್ರಾ.ಪಂ. ಅಧ್ಯಕ್ಷ ಎಂ.ಹೆಚ್. ಹನುಮಂತಪ್ಪ ಸೇರಿದಂತೆ ಹಾಲಿವಾಣ ಗ್ರಾಮದ ಎಲ್ಲಾ ಸಮಾಜದ ಮುಖಂಡರನ್ನು ಸನ್ಮಾನಿಸಿ, ಗೌರವಿಸಲಾಯಿತು.

# ಚಂದ್ರಯಾನ : ಇಸ್ರೋ ವಿಜ್ಞಾನಿಗಳಿಗೆ ಸಿದ್ಧಗಂಗಾ ಸಂಸ್ಥೆ ಅಭಿನಂದನೆ




ದಾವಣಗೆರೆ, ಆ. 24- ಜಾಗತಿಕ ಇತಿಹಾಸದಲ್ಲಿ ತನ್ನ ಅಪ್ರತಿಮ ಸಾಧನೆ ಮೆರೆದು ಚಂದ್ರನ ದಕ್ಷಿಣ ಭಾಗದಲ್ಲಿ ತನ್ನ ಹೆಜ್ಜೆಯೂರಿದ ತ್ರಿವಿಕ್ರಮ ಲ್ಯಾಂಡರ್‌ಗೆ ಮತ್ತು ಇದಕ್ಕೆ ಕಾರಣೀಭೂತರಾದ ಇಸ್ರೋದ ಎಲ್ಲಾ ವಿಜ್ಞಾನಿಗಳಿಗೆ ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮಕ್ಕಳು ಹರ್ಷೋದ್ಗಾರಗಳಿಂದ ಅಭಿನಂದಿಸಿದರು.

ರಾಕೆಟ್‌ಗಳ ಮತ್ತು ವಿಕ್ರಮ ಲ್ಯಾಂಡರ್‌ನ ಬೃಹತ್ ಚಿತ್ರಗಳನ್ನು ಹಿಡಿದು ಸಂಭ್ರಮಿಸಿದರು. ತ್ರಿವರ್ಣ ಧ್ವಜಗಳನ್ನು ಹಾರಾಡಿಸಿ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಶಿಕ್ಷಕರು, ಆಡಳಿತ ಮಂಡಳಿಯ ಡಾ. ಜಯಂತ್, ಕಾರ್ಯದರ್ಶಿ ಹೇಮಂತ್ ಈ ಕ್ಷಣಗಳಿಗೆ ಸಾಕ್ಷಿಯಾದರು. ಹಿರಿಯ ವಿದ್ಯಾರ್ಥಿಗಳಾದ ರಾಮ ಮನೋಹರ, ಪ್ರವೀಣ ಮುಂಡಾಸದ ಅವರು ಈ ಅಭಿನಂದನಾ ಕ್ಷಣಗಳನ್ನು ಕಣ್ತುಂಬಿಸಿಕೊಂಡರು. 9ನೇ ತರಗತಿ ವಿದ್ಯಾರ್ಥಿನಿ ಮಹಾಲಕ್ಷ್ಮಿ ಮತ್ತು ಸಿದ್ಧಗಂಗಾ ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿಸೌಜ ರವರು ಚಂದ್ರಯಾನದ ಯಶಸ್ಸಿನ ಹಿಂದಿರುವ ಜಾಣ್ಮೆ, ಶ್ರಮ, ಶ್ರದ್ಧೆ, ಐಕ್ಯತೆಯನ್ನು ಶ್ಲಾಘಿಸುತ್ತಾ ಭಾರತದ ಈ ಸಾಧನೆ ಅವಿಸ್ಮರಣೀಯ ಎಂದರು.

# ಎನ್.ಇ.ಪಿ. ರದ್ದತಿಗೆ ಆಗ್ರಹ

## ಜಗಳೂರಿನಲ್ಲಿ ಪ್ರಗತಿ ಪರ ವಿದ್ಯಾರ್ಥಿ ಸಂಘಟನೆ ಪ್ರತಿಭಟನೆ




ಜಗಳೂರು, ಆ.24- ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಶೀಘ್ರವೇ ರದ್ದುಪಡಿಸಲು ಆಗ್ರಹಿಸಿ ಪ್ರಗತಿ ಪರ ವಿದ್ಯಾರ್ಥಿ ಸಂಘಟನೆಗಳು ಇಂದು ಪ್ರತಿಭಟನೆ ನಡೆಸಿ ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿ ಲಿಖಿತ ಮನವಿ ಸಲ್ಲಿಸಿದರು.

ದಲಿತ ವಿದ್ಯಾರ್ಥಿ ಒಕ್ಕೂಟದ ತಾಲ್ಲೂಕು ಸಂಚಾಲಕ ಅಸಗೋಡು ಶಿವಕುಮಾರ್ ಮಾತನಾಡಿ, ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಮರುಪರೀಕ್ಷೆಗೆ ಅವಕಾಶ ನೀಡಬೇಕು. ಪದವಿ ಕಾಲೇಜುಗಳಲ್ಲಿ ಕ್ಯಾರಿ ಓವರ್ ಸಿಸ್ಟಮ್ ನಡಿ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಮುಂದಿನ ವರ್ಷದ ವ್ಯಾಸಂಗದಲ್ಲಿ ಬಡ್ತಿಗೆ ಅವಕಾಶವಿದೆ.

ಅಂತಿಮ ವರ್ಷದ ವಿದ್ಯಾರ್ಥಿಗಳು ಎರಡಕ್ಕಿಂತ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣರಾದವರಿಗೆ ಮರುಪರೀಕ್ಷೆ ನಡೆಸಬೇಕು. ದೇಶದಲ್ಲಿ ಯುಜಿಸಿ ನಿಯಮಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು.ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಇರುವ ಅವಕಾಶದಂತೆ ದಾವಣಗೆರೆ ವಿಶ್ವವಿದ್ಯಾನಿಲಯ ಅನುಸರಿಸಬೇಕು ಎಂದು ಒತ್ತಾಯಿಸಿದರು.

ಸಂದರ್ಭದಲ್ಲಿ ಡಿಎಸ್‌ಎಸ್ ತಾಲ್ಲೂಕು ಸಂಚಾಲಕ ಸತೀಶ್, ದಲಿತ ವಿದ್ಯಾರ್ಥಿ ಒಕ್ಕೂಟದ ಜೀವನ್, ಎಸ್.ಎಫ್.ಐ ಜಿಲ್ಲಾ ಸಂಚಾಲಕ ಅನಂತರಾಜ್, ಎಐಎಸ್ ಎಫ್ ರಾಜ್ಯ ಸಹಕಾರ್ಯದರ್ಶಿ ಮಾದಿಹಳ್ಳಿ ಮಂಜಪ್ಪ, ಎಐಎಸ್‌ಎಫ್ ಮುಖಂಡರಾದ ಮಧು ದೇವಿಕೆರೆ, ಕಿರಣ್, ಲಿಂಗಣ್ಣಹಳ್ಳಿ ಮಂಜುನಾಥ್, ವಿವೇಕಾನಂದ, ಅಜಯ್, ಕಾರ್ತಿಕ, ರಾಕೇಶ್, ಗುರು, ತಿಮ್ಮಣ್ಣ ಸೇರಿದಂತೆ ಇತರರು ಇದ್ದರು.

# ಜಡ್ಜ್‌ಗಳಲ್ಲಿ ಮೇಲ್ಜಾತಿಯವರೇ ಹೆಚ್ಚು

(1ನೇ ಪುಟದಿಂದ) ಜನರನ್ನು 458 ನ್ಯಾಯಮೂರ್ತಿಗಳಾಗಿ ನೇಮಿಸಿದರೆ, ಅದು ನಿಜವಾದ ಭಾರತದ ಪ್ರತಿಬಿಂಬವಾಗುತ್ತದೆಯೇ? ಈ ಬಗ್ಗೆ ಚರ್ಚಿಸುವ ಅಗತ್ಯವಿಲ್ಲವೇ? ನಮ್ಮ ದನಿ ಎತ್ತುವ ಅಗತ್ಯವಿಲ್ಲವೇ? ನ್ಯಾಯಿಕ ವ್ಯವಸ್ಥೆಯಲ್ಲಿ ಎಲ್ಲ ಹಂತಗಳಲ್ಲಿ ಪ್ರತಿಯೊಂದು ವರ್ಗಕ್ಕೂ ಪ್ರಾತಿನಿಧ್ಯದ ಹಕ್ಕು ನೀಡಲು ನ್ಯಾಯಾಂಗ ತನ್ನ ದಾರಿ ಸರಿಪಡಿಸಿಕೊಳ್ಳಬೇಕಲ್ಲವೇ? ಆದರೆ, ಈ ಬಗ್ಗೆ ಚರ್ಚೆ ಮಾಡುತ್ತಿಲ್ಲ ಎಂದವರು ವಿಷಾದಿಸಿದರು.

ನ್ಯಾಯಾಂಗದ ಮೇಲೆ ಹಿಡಿತ ಸಾಧಿಸಲು ಈ ಹಿಂದೆಯೂ ಪ್ರಯತ್ನಗಳು ನಡೆಯುತ್ತಿದ್ದವು. ಈಗ ಆ ಪ್ರಯತ್ನಗಳು ಹೆಚ್ಚಾಗಿವೆ. ನ್ಯಾಯಮೂರ್ತಿಗಳನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡುವ ಮೂಲಕ, ಆಯೋಗಗಳಿಗೆ ನೇಮಕ ಮಾಡುವ ಮೂಲಕ ರಾಜಕೀಯ ಪ್ರಭಾವ ಬೀರುವ ಪ್ರಯತ್ನಗಳು ನಡೆದಿವೆ. ಈ ಬಗ್ಗೆಯೂ ಚರ್ಚೆಗಳು ನಡೆಯಬೇಕಿದೆ ಎಂದವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣಕುಮಾರ್, ಯುವ ವಕೀಲರು ಭಾರತದ ಸ್ವಾತಂತ್ರ್ಯ ಹಾಗೂ ಗಣತಂತ್ರವನ್ನು ಕಾಪಾಡುವ ಹೊಣೆ ಹೊಂದಿದ್ದಾರೆ ಎಂದರು.

ವೇದಿಕೆಯ ಮೇಲೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ, ಆರ್. ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಜಿ.ಎಸ್. ಯತೀಶ್, ಸಂವಿಧಾನ ಓದು ಅಭಿಯಾನದ ಸಂಯೋಜಕ ಕೆ.ಹೆಚ್. ಪಾಟೀಲ್ ಉಪಸ್ಥಿತರಿದ್ದರು.

## ಪ್ರಕರಣಗಳ ಇತ್ಯರ್ಥದಲ್ಲಿ ಭಾರತದ ನ್ಯಾಯಾಂಗವೇ ಮುಂದೆ

ಭಾರತದಲ್ಲಿ ಒಂದು ವರ್ಷದಲ್ಲಿ ಸುಪ್ರೀಂ ಕೋರ್ಟ್ 70 ಸಾವಿರ, ಹೈಕೋರ್ಟ್‌ಗಳು 20 ಲಕ್ಷ ಹಾಗೂ ಕೆಳ ಹಂತದ ನ್ಯಾಯಾಲಯಗಳು 1.80 ಕೋಟಿ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಿವೆ. ಪ್ರಕರಣಗಳ ಇತ್ಯರ್ಥದಲ್ಲಿ ಭಾರತ ಉಳಿದೆಲ್ಲ ದೇಶಗಳಿಗಿಂತ ಮುಂದಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್. ಎನ್.ನಾಗಮೋಹನದಾಸ್ ಹೇಳಿದರು. ಯುರೋಪ್ ದೇಶಗಳಲ್ಲಿ ಪ್ರತಿ ಹತ್ತು ಲಕ್ಷ ಜನರಿಗೆ 120 ನ್ಯಾಯಮೂರ್ತಿಗಳಿದ್ದಾರೆ. ಭಾರತದಲ್ಲಿ ಹತ್ತು ಲಕ್ಷ ಜನರಿಗೆ ಕೇವಲ 21 ನ್ಯಾಯಮೂರ್ತಿಗಳಿದ್ದಾರೆ. ಪ್ರಕರಣಗಳು ಬಾಕಿ ಉಳಿಯಲು ಇದೇ ಪ್ರಮುಖ ಕಾರಣ ಎಂದರು. ನ್ಯಾಯಾಂಗದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ, ಪ್ರಕ್ರಿಯಾತ್ಮಕ ವಿಳಂಬ, ನ್ಯಾಯಕ್ಕೆ ಪರ್ಯಾಯ ಮಾರ್ಗಗಳನ್ನು ಬಳಸಿಕೊಳ್ಳದೇ ಇರುವುದು, ಕಕ್ಷಿದಾರರ ಮನೋಭಾವದಿಂದ ಪ್ರಕರಣಗಳ ಬಾಕಿ ಹೆಚ್ಚಾಗುತ್ತಿದೆ. ಪ್ರಕರಣಗಳ ವಿಳಂಬದಲ್ಲಿ ನ್ಯಾಯಾಂಗದ ಪಾತ್ರ ಕಡಿಮೆ ಎಂದವರು ಅಭಿಪ್ರಾಯ ಪಟ್ಟರು.

## ಸೌಜನ್ಯ ಪ್ರಕರಣದ ಚರ್ಚೆ ಏಕಿಲ್ಲ?

**(1ನೇ ಪುಟದಿಂದ) ಅಮಾಯಕ ಯುವಕನಿಗೆ ಮರಣ ದಂಡನೆಯಾಗಿತ್ತು. 2012ರಲ್ಲಿ ಅಲ್ಲಿನ ಯುವ ವಕೀಲರು ಮರು ವಿಚಾರಣೆಗೆ ಒತ್ತಾಯಿಸಿ, ಯುವಕ ಅಮಾಯಕ ಎಂದು ಸಾಬೀತು ಪಡಿಸಿ ಕುಟುಂಬದ ಮೇಲಿದ್ದ ಕಳಂಕ ನಿವಾರಿಸಿದರು. ಭಾರತದಲ್ಲಿಯೂ ಸಹ ಸೌಜನ್ಯ ಪ್ರಕರಣ ಸೇರಿದಂತೆ ಇಂತಹ ಒಂದೆರಡು ಪ್ರಕರಣಗಳನ್ನಾದರೂ ಯುವ ವಕೀಲರು ಕೈಗೆತ್ತಿಕೊಳ್ಳಬೇಕು ಎಂದವರು ಕಿವಿಮಾತು ಹೇಳಿದರು.**

# ಎಸ್‌ಪಿಎಸ್ ನಗರದ ಸ.ಶಾಲೆಯಲ್ಲಿ ಚಂದ್ರಯಾನ - 3 ಲ್ಯಾಂಡಿಂಗ್ ಪ್ರಸಾರ



ದಾವಣಗೆರೆ, ಆ. 24- ಎಸ್‌ಪಿಎಸ್ ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಚಂದ್ರಯಾನ ಕುರಿತಂತೆ ಪ್ರಾತ್ಯಕ್ಷಿಕೆ ನೀಡಲಾಯಿತು. ಈ ಸಂದರ್ಭದಲ್ಲಿ ಚಂದ್ರಯಾನ - 3 ಲ್ಯಾಂಡಿಂಗ್‌ನ ನೇರ ಪ್ರಸಾರ ತೋರಿಸಲಾಯಿತು. ಶಿಕ್ಷಕ ಸಿ.ಎಂ. ಮೇಘನಾಥ್, ಸ್ಥಳೀಯ ಮುಖಂಡ ವಾಸುದೇವ, ಮುಖ್ಯೋಪಾಧ್ಯಾಯ ಶ್ರೀಮತಿ ಲಕ್ಷ್ಮೀದೇವಿ ಹಾಗೂ ಶಾಲೆಯ ಸಿಬ್ಬಂದಿ ವರ್ಗ ಹಾಜರಿದ್ದರು.

# ಇಂಪೀರಿಯಲ್ ಶಾಲೆಯಲ್ಲಿ ಸಂಭ್ರಮ



ದಾವಣಗೆರೆ, ಆ. 24- ನಗರದ ಇಂಪೀರಿಯಲ್ ಪಬ್ಲಿಕ್ ಶಾಲೆಯಲ್ಲಿ ಇಸ್ರೋದ ಮಹತ್ವಾಕಾಂಕ್ಷಿ ಚಂದ್ರಯಾನ - 3 ಲ್ಯಾಂಡರ್‌ನ ಸಾಫ್ಟ್ ಲ್ಯಾಂಡಿಂಗ್ ಪ್ರಕ್ರಿಯೆಯ ನೇರ ಪ್ರಸಾರವನ್ನು ಏರ್ಪಡಿಸಲಾಗಿತ್ತು. ಶಿಕ್ಷಕಿ ಟಿ.ಕೆ. ಶೃತಿ ಮಕ್ಕಳಿಗೆ ಮಾಹಿತಿ ತಿಳಿಸಿ, ಇಸ್ರೋ ವಿಜ್ಞಾನಿಗಳಿಗೆ ನಮನ ಸಲ್ಲಿಸಿ, ಸಿಹಿ ಹಂಚಿದರು.

ಚೇತನಾ ವಿದ್ಯಾಸಂಸ್ಥೆಯ ಅಧ್ಯಕ್ಷ ಹಾಗೂ ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ. ನ ನಿರ್ದೇಶಕ ಕೆ.ಎನ್. ಓಂಕಾರಪ್ಪ, ಸಂಸ್ಥೆಯ ನಿರ್ದೇಶಕ ಎ.ಎಂ. ಸಚಿನ್ ಚಕ್ರವರ್ತಿ, ಶಾಲೆಯ ಪ್ರಾಂಶುಪಾಲ ಎನ್.ವಿ. ರಮೇಶ್, ಸಹಶಿಕ್ಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಹಳೇಬಾತಿಯಲ್ಲಿ ವಿಜಯೋತ್ಸವ



ಹಳೇಬಾತಿ, ಆ.24- ಇಸ್ರೋ ಚಂದ್ರಯಾನ 3 ಯಶಸ್ವಿಯಾಗಿ ಸಾಫ್ಟ್ ಲ್ಯಾಂಡಿಂಗ್ ಆದ ಸಂಭ್ರಮದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಹಳೇಬಾತಿ ಯುವಕರ ಸಂಘದ ಸಿದ್ದೇಶ್, ಶಂಕರ ಮೂರ್ತಿ, ರಾಜು, ಅಶೋಕ್, ನವೀನ್, ಯುವರಾಜ್, ಸಂದೀಪ್, ಸಂಜು ಹಾಗೂ ಇತರರು ಈ ಸಂದರ್ಭದಲ್ಲಿದ್ದರು.



# ಸುವರ್ಣ ಕರ್ನಾಟಕದಿಂದ ಸಿಹಿ

ದಾವಣಗೆರೆ, ಆ. 24 - ಚಂದ್ರಯಾನ 3 ಯಶಸ್ವಿಯಾಗಿ ಸಾಫ್ಟ್ ಲ್ಯಾಂಡ್ ಆದ ಹಿನ್ನೆಲೆಯಲ್ಲಿ ನಗರದಲ್ಲಿ ಸುವರ್ಣ ಕರ್ನಾಟಕ ವೇದಿಕೆ ಮತ್ತು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಶಿಶು ಪಾಲನ ಕೇಂದ್ರದಲ್ಲಿ ವಿಜಯೋತ್ಸವವನ್ನು ಸಿಹಿ ಹಂಚುವ ಮತ್ತು ಭಾರತ ಮಾತಾಕಿ ಜೈ ಎಂದು ವಂದೇ ಮಾತರಂ ಘೋಷಣೆಯೊಂದಿಗೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್ ಮಾತನಾಡಿ, ಯಶಸ್ಸಿಗೆ ಕಾರಣರಾದ ಇಸ್ರೋದ ಎಲ್ಲಾ ವಿಜ್ಞಾನಿಗಳಿಗೆ ಶುಭ ಕೋರಿದರು.

# ಹರಿಹರ : ಸಾರ್ವಜನಿಕರಿಂದಲೇ ರಸ್ತೆ ದುರಸ್ತಿ ಕಾರ್ಯ



ಹರಿಹರ, ಅ. 24 - ನಗರದ ಗುತ್ತೂರಿನ ಶ್ರೀ ಮರಳ ಸಿದ್ದೇಶ್ವರ ಬೇಕರಿ ಮುಂದಿನ ರಸ್ತೆಯಲ್ಲಿ ಬೃಹತ್ ಪ್ರಮಾಣದಲ್ಲಿ ಗುಂಡಿಗಳು ಇರುವ ಬಗ್ಗೆ ಸ್ಥಳೀಯರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನ ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಸ್ಥಳೀಯ ನಿವಾಸಿಗಳು ಹಾಗೂ ವ್ಯಾಪಾರಸ್ಥರು ಸ್ವಂತ ಹಣ ದಿಂದ ರಸ್ತೆಗೆ ಕಾಂಕ್ರೀಟ್ ಹಾಕಿ ದುರಸ್ತಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ರಾಜಣ್ಣ, ಕಿರಣ್ ಕುಮಾರ್ ಕಂಚಿಕೇರಿ, ಪ್ರಸನ್ನ, ಕೆ.ಎಸ್. ಸ್ವಾಮಿ, ಕೆ.ಎಸ್. ನಿಕ್ಕಲ್ ಇತರರು ಹಾಜರಿದ್ದರು.

# ನಗರದಲ್ಲಿ ಇಂದು ಯಲ್ಲಮ್ಮದೇವಿ ದೇವಸ್ಥಾನದ 17ನೇ ವಾರ್ಷಿಕೋತ್ಸವ

ಜಾಲಿನಗರದ ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನದ 17ನೇ ವರ್ಷದ ವಾರ್ಷಿಕೋತ್ಸವವು ಇಂದು ಜರುಗಲಿದೆ.

ಬೆಳಿಗ್ಗೆ 8-30 ರಿಂದ ಕುಂಬಾಭಿಷೇಕ, 9-30 ರಿಂದ ಪಂಚಾಮೃತಾಭಿಷೇಕ, 10-30 ರಿಂದ ದೇವಿಯ ಅಲಂಕಾರ, ಗಣಹೋಮ, ದುರ್ಗಾಹೋಮ, ಯಲ್ಲಮ್ಮನ ಹೋಮ, ಮೃತ್ಯುಂಜಯ ಹೋಮ, ನವಗ್ರಹ ಹೋಮ ನಡೆಯಲಿದೆ.

ವಿಶೇಷ ಆಹ್ವಾನಿತರಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಮೇಯರ್ ವಿನಾಯಕ ಪೈಲ್ವಾನ್, ಬಿ.ವೀರಣ್ಣ, ಬಿ.ಜೆ. ಅಜಯ್‌ಕುಮಾರ್, ಗಾಯತ್ರಿಬಾಯಿ ಖಂಡೋಜಿರಾವ್ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.




ಭಕ್ತಿಪೂರ್ವಕ ಸುಸ್ವಾಗತ







ಯುರೋಪ್ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿ ಸ್ವದೇಶಕ್ಕೆ ಮರಳಿರುವ ನನ್ನ ಪೂಜ್ಯ ಗುರುಗಳಾದ
ಶ್ರೀ ಶ್ರೀ ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ
ಡಾ. ಶಿವಪ್ರಕಾಶ ಸ್ವಾಮೀಜಿ ಇವರೀರ್ವರಿಗೂ ಅನಂತ ಶಿರಸ್ಸಾಂಗ ನಮಸ್ಕಾರಗಳು.
ಸಿರಿಗೆರೆ ಮಠ, ಕರ್ನಾಟಕದ ಕೀರ್ತಿ ಹಾಗೂ ಬಸವ ಸಂದೇಶವನ್ನು ಪ್ರಪಂಚದಾದ್ಯಂತ ಸಾರುತ್ತಿರುವ ಡಾ. ಗುರೂಜಿಯವರಿಗೆ ನನ್ನ ಭಕ್ತಿಪೂರ್ವಕ ನಮನಗಳು.

ಶಾಮನೂರು ಕಲ್ಲೇಶ್ ಜಿ.ಆರ್.
ರಾಷ್ಟ್ರೀಯ ಹಾಗೂ ರಾಜ್ಯ ನಾಯಕರುಗಳ ನಿರೀಕ್ಷೆಯಲ್ಲಿರುವ
ಲೋಕಸಭಾ ಕ್ಷೇತ್ರದ ಪ್ರಬಲ ಅಭ್ಯರ್ಥಿ. ರಾಜ್ಯಸಭಾ ಸದಸ್ಯತ್ವ ಅಥವಾ ನಾಮನಿರ್ದೇಶಿತ ಎಂ.ಎಲ್.ಸಿ.
ಮೊಬೈಲ್ : 87229 99997, 87225 55557
ಶಾಮನೂರು ಕಲ್ಲೇಶ್ ಅಭಿಮಾನಿ ಬಳಗ





॥ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ






ದಾವಣಗೆರೆ ಸಿಟಿ ಆಂಜನೇಯ ಬಡಾವಣೆ ವಾಸಿ,
ಶ್ರೀ ಎ.ಟಿ. ಶಿವಮೂರ್ತಿ, ನಿವೃತ್ತ ಮುಖ್ಯೋಪಾಧ್ಯಾಯರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18-08-2023ರ ಶುಕ್ರವಾರ ಸಂಜೆ 6.30 ಕ್ಕೆ ನನ್ನ ತಮ್ಮ ಶ್ರೀ ಎ.ಟಿ. ಮುರುಗೇಶ್, ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ, ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್ ದಾವಣಗೆರೆ ಇವರ ಧರ್ಮಪತ್ನಿ
ನೇತ್ರದಾನಿ ಶ್ರೀಮತಿ ಕೊಟ್ರಮ್ಮ ಭದ್ರಶೆಟ್ಟಿ
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ಜಗದ್ಗುರು ಶ್ರೀ ಶ್ರೀ ಶ್ರೀ ವಚನಾನಂದ ಮಹಾಸ್ವಾಮಿಗಳು
ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ, ಸುಕ್ಷೇತ್ರ ಹರಿಹರ
ಇವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 26-08-2023ರ ಶನಿವಾರ ಬೆಳಿಗ್ಗೆ 11.30 ಕ್ಕೆ ಸರ್ಕಾರಿ ನಿವೃತ್ತ ನೌಕರರ ಭವನ, ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಶ್ರೀ ಎ.ಟಿ. ಶಿವಮೂರ್ತಿ, ಶ್ರೀ ಎ.ಟಿ. ಮುರುಗೇಶ್, ಸಹೋದರರು, ಸಹೋದರಿ, ಮೃತರ ಮಗ ಎ.ಎಮ್. ಚಂದನ್, ಸೊಸೆ ಮತ್ತು ಐಗೂರು ಅಂಗಡಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 94485 67567, 94498 55542

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.


KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas





# ಮುವತ್ತೊಂದು ವರ್ಷಗಳ ಸಾರ್ಥಕ ಸಂಭ್ರಮ...

## ವರಮಹಾಲಕ್ಷ್ಮಿ ಹಬ್ಬದ ಶುಭ ದಿನದಂದು ಪ್ರಾರಂಭವಾದ ನಮ್ಮ ಸಂಸ್ಥೆ

# ಗುಂಡಾಲ್ ಬ್ಯುಸಿನೆಸ್ ಡಾಟಾ ಸಲ್ಯೂಷನ್ಸ್





31 YEARS ANNIVERSARY

gundal Business Private Limited Since 1992

ಮಹಾಲಕ್ಷ್ಮಿಯ ಕೃಪೆಯಿಂದ ಇಂದು ಸಾರ್ಥಕ 31 ವರ್ಷಗಳನ್ನು ಪೂರೈಸಿ 32ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ.
ಈ ಶುಭ ಸಂದರ್ಭದಲ್ಲಿ ನಮ್ಮ ಸಂಸ್ಥೆ ಯಶಸ್ವಿಯಾಗಿ ಮುನ್ನಡೆಯಲು ಪ್ರೋತ್ಸಾಹಿಸಿದ ಕರ್ನಾಟಕ ಹಾಗೂ ಓರಿಸ್ಸಾ ರಾಜ್ಯದ ಚುನಾವಣಾ ಆಯೋಗದ ಅಧಿಕಾರಿಗಳಿಗೆ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಮಾರ್ಗದರ್ಶನ ನೀಡಿದ ಎಲ್ಲಾ ಹಿರಿಯರಿಗೆ, ಸ್ನೇಹಿತರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ

## ನನ್ನ ಹೃದಯ ತುಂಬಿದ ಕೃತಜ್ಞತೆಗಳು....

**ಗುಂಡಾಲ್ ಪರಶುರಾಮ್ ಮಂಜುನಾಥ್**, ಸಿಇಓ

**ಗುಂಡಾಲ್ ಗ್ರೂಪ್ ಆಫ್ ಕಂಪನೀಸ್**

- ಗುಂಡಾಲ್ ಬ್ಯುಸಿನೆಸ್ ಡಾಟಾ ಸಲ್ಯೂಷನ್ಸ್
- ಗುಂಡಾಲ್ ಬ್ಯುಸಿನೆಸ್ ಪ್ರೈ.ಲಿ.,
- ಗುಂಡಾಲ್ ಇನ್ಫೊಟೆಕ್ ಪ್ರೈ.ಲಿ.,
- ಶಿಂಷಾ ಫೌಂಡೇಷನ್ (ರಿ.,)
- ದೇವನಗರಿ ಸ್ಯಾರೀಸ್ & ಜ್ಯೂಯಲ್ಸ್
- ಜಿ-ಕನೆಕ್ಟ್ ಇ ಸರ್ವೀಸಸ್
- ಜಾತಸ್ಯ ಅರ್ಗ್ಯಾನಿಕ್ಸ್ ಎಲ್‌ಎಲ್‌ಪಿ (ದೇವರಿಗೆ ಮುಡಿಸಿದ ಹೂಗಳಿಂದ ತಯಾರಿಸಿದ ಜಾತಸ್ಯ ಅಗರ್‌ಬತ್ತಿ)



JATASYA GROWN BY NATURE

# ಬೋನಿನಲ್ಲಿ ಬಂಧಿಯಾದ ರೌಡಿ ಕೋತಿ



ದಾವಣಗೆರೆ, ಆ. 24- ಅದು ರೌಡಿ ಕೋತಿ, ಸಿಕ್ಕ ಸಿಕ್ಕವರ ಮೇಲೆ ಎಗರುತ್ತಾ ಕಚ್ಚಿ, ದೂಡಿ ಹೋಗುತ್ತಿತ್ತು, ಕೋತಿಯ ಉಪಟಳಕ್ಕೆ ಜನರು ಬೇಸತ್ತು ಹೋಗಿದ್ದರು, ನಿನ್ನೆ ಬೋನಿನೊಳಗೆ ಬಂದು ಜಸ್ಟ್ ಮಿಸ್ ಆಗಿ ತಪ್ಪಿಸಿಕೊಂಡು ಹೋಗಿದ್ದ ಕೋತಿ ಇಂದು ಬೋನಿಗೆ ಬಿದ್ದು ಲಾಕ್ ಆಗಿದೆ.

ಹೌದು.. ಈ ಘಟನೆ ನಡೆದಿದ್ದು ಹಳೇ ಕುಂದುವಾಡದಲ್ಲಿ. ಇಪ್ಪತ್ತಕ್ಕೂ ಹೆಚ್ಚು ಜನರಿಗೆ, ಮಕ್ಕಳಿಗೆ ಕಚ್ಚಿ ಘಾಸಿಗೊಳಿಸಿತ್ತು. ಮಕ್ಕಳು ಶಾಲೆಗೆ ಹೋಗಲು, ವಾಪಸ್ ಮನೆಗೆ ತೆರಳಲು ಭಯಪಡುತ್ತಿದ್ದರು. ಕೋತಿ ಬೈಕ್ ಸವಾರರನ್ನೆ ಹೆಚ್ಚು ಟಾರ್ಗೆಟ್ ಮಾಡುತ್ತಿತ್ತು. ಬೈಕ್ ನಲ್ಲಿ ಹೋಗುತ್ತಿದ್ದವರ ಹೆಗಲ ಮೇಲೆ ಓಡಿ ಬಂದು ಕೂತು ಕಚ್ಚುತ್ತಿತ್ತು, ಇದರಿಂದ ಹೆದರಿ ಎಷ್ಟೋ ಜನ ಬೈಕ್ ನಿಂದ ಬಿದ್ದು ಗಾಯಗೊಂಡಿದ್ದರು, ನಿಂತಿದ್ದ ಬೈಕ್ ಗಳನ್ನು ಕಾಲಿನಿಂದ ದೂಡಿ ಬೀಳಿಸುತ್ತಿತ್ತು. ಮುಷ್ಯನ ಕೀಟಲೆಯಿಂದ ಜನರು ಬೇಸತ್ತು ಹೋಗಿದ್ದರು.

ಈ ಹಿನ್ನೆಲೆ ಜನರು ಅರಣ್ಯ ಇಲಾಖೆ ಉಪಸಂರಕ್ಷಣಾ ಅಧಿಕಾರಿ ಶಶಿಧರ್ ಅವರಿಗೆ ದೂರು ನೀಡಿದ್ದರು. ದೂರು ಹಿನ್ನಲೆ ಕಾರ್ಯಾಚರಣೆಗೆ ಇಳಿದಿದ್ದ ಅರಣ್ಯ ಇಲಾಖೆ ನಾಲ್ಕೈದು ದಿನದಿಂದ ಬೋನಿಟ್ಟು ಕಾದಿತ್ತು, ಬೋನಿನೊಳಗೆ ಬಾಳೆಹಣ್ಣು, ಬಿಸ್ಕೆಟ್ ಇಡಲಾಗಿತ್ತು, ನಿನ್ನೆ ಬಾಳೆಹಣ್ಣು ತಿನ್ನುತ್ತಾ ಬೋನಿನೊಳಗೆ ಕೋತಿ ಹೋಗಿತ್ತು, ಆದರೆ ಕೂಡಲೇ ಎಚ್ಚೆತ್ತ ಕೋತಿ ಲಾಕ್ ಬೀಳುವ ಮೊದಲೇ ಎಸ್ಕೇಪ್ ಆಗಿ ಓಡಿ ಹೋಗಿತ್ತು.

ಮತ್ತೆ ಇಂದು ಬೆಳಿಗ್ಗೆ ಅರಣ್ಯ ಇಲಾಖೆಗೆ ಕರೆ ಮಾಡಿ ಹೆಚ್ಚಿನ ಸಿಬ್ಬಂದಿ ಕಳುಹಿಸುವಂತೆ ಮನವಿ ಮಾಡಿದ ಹಿನ್ನಲೆ ಕೋರಿಕೆಗೆ ಸ್ಪಂದಿಸಿದ ಇಲಾಖೆ, ನಾಲ್ಕು ಜನರ ತಂಡವನ್ನು ಕಳುಹಿಸಿತ್ತು, ಒಂದು ಬಾರಿ ತಪ್ಪಿಸಿಕೊಂಡು ಹೋಗಿದ್ದರಿಂದ ಆ ಒಂದು ಸ್ಥಳದಲ್ಲಿ ಕೋತಿ ಸುಳಿದಿರಲಿಲ್ಲ. ಹೀಗಾಗಿ ಇನ್ನೊಂದು ಪ್ರದೇಶದಲ್ಲಿ ಬೋನಿಟ್ಟು ಮತ್ತೆ ಹಣ್ಣುಗಳನ್ನು ಇಟ್ಟು ಜೊತೆಗೆ ಮಿರರ್ ಇಡಲಾಗಿತ್ತು. ಇಂದು ಕೋತಿಗೆ ಗ್ರಹಚಾರ ಬೋನಿನ ಮೂಲಕ ಕಾದು ಕೂತಿತ್ತೇನೋ, ಹಣ್ಣು ತಿನ್ನುತ್ತಾ ಬೋನಿನ ಒಳಗೆ ಹೋದ ತಕ್ಷಣ ಸಿಬ್ಬಂದಿ ಬೋನ್ ಲಾಕ್ ಮಾಡಿದ್ದು, ಕೊನೆಗೂ ಮುಷ್ಯ ಬೋನಿಗೆ ಬಿದ್ದಿದೆ.

ಇದರಿಂದ ಜನರು ನಿಟ್ಟುಸಿರು ಬಿಟ್ಟಿದ್ದು, ಅರಣ್ಯ ಇಲಾಖೆಗೆ ಹಳೇ ಕುಂದುವಾಡ ಗ್ರಾಮಸ್ಥರು ಧನ್ಯವಾದ ತಿಳಿಸಿದ್ದಾರೆ. ಇನ್ನೂ ಸೆರೆಸಿಕ್ಕ ಕೋತಿಯನ್ನು ಕಾಡಿಗೆ ಬಿಡಲು ಸಿದ್ಧತೆ ನಡೆಸಲಾಗಿದೆ, ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳಾದ ಇದಾಯಿತ್, ಹರೀಶ್, ಮರುಳಸಿದ್ದಪ್ಪ, ದೇವರಾಜ್, ಶರಣಪ್ಪ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು..

# ಚಂದ್ರಯಾನ: ವಿಜ್ಞಾನಿಗಳಿಗೆ ಸರ್ಕಾರಗಳಿಂದ ಗೌರವ

ಬೆಂಗಳೂರು, ಆ.24 - ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ಇಳಿಯಲು ಯಶಸ್ಸಿಗೆ ಕಾರಣರಾದ ವಿಜ್ಞಾನಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಗೌರವ ಸಲ್ಲಿಸಲಿವೆ.

ವಿದೇಶ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಬೆಳಿಗ್ಗೆ ಇಸ್ರೋ ಸಂಸ್ಥೆಗೆ ಭೇಟಿ ನೀಡಿ ಅಧ್ಯಕ್ಷ ಸೋಮನಾಥ್ ಸೇರಿದಂತೆ ಚಂದ್ರಯಾನ-3ರ ಯೋಜನೆ ಯಶಸ್ಸಿಗೆ ಶ್ರಮಿಸಿದ ವಿಜ್ಞಾನಿಗಳನ್ನು ಅಭಿನಂದಿಸಲಿದ್ದಾರೆ. ಸುಮಾರು ಎರಡು ಗಂಟೆಗಳ ಕಾಲ ವಿಜ್ಞಾನಿಗಳೊಂದಿಗೆ ಸಮಾಲೋಚನೆ ನಡೆಸಿ ರಾಷ್ಟ್ರದ ಪರವಾಗಿ ಅವರಿಗೆ ಗೌರವ ಸಮರ್ಪಣೆ ಮಾಡಲಿದ್ದಾರೆ.

ಭಾರತದ ಮಹತ್ವಾಕಾಂಕ್ಷಿ ಚಂದ್ರಯಾನ-3ರ ಯಶಸ್ಸಿನ ಐತಿಹಾಸಿಕ ಕ್ಷಣವನ್ನು ಮೋದಿ ಅವರು ಈಗಾಗಲೇ ನವ ಭಾರತದ ಉದಯ ಎಂದು ವ್ಯಾಖ್ಯಾನಿಸಿದ್ದಾರೆ.

ಬ್ರಿಕ್ಸ್ ಶೃಂಗದಲ್ಲಿ ಪಾಲ್ಗೊಂಡು ಜೋಹಾನ್ಸ್‌ಬರ್ಗ್‌ನಲ್ಲಿರುವ ಪ್ರಧಾನಿ ಅವರು, ಅಲ್ಲಿಂದಲೇ ಇಸ್ರೋ ಅಧ್ಯಕ್ಷರನ್ನು ಸಂಪರ್ಕಿಸಿ ಅಭಿನಂದನೆ ಸಲ್ಲಿಸಿದ್ದಲ್ಲದೆ, ಕಾರ್ಯಕ್ರಮ ಮುಗಿಸಿ ನೇರವಾಗಿ ನಿಮ್ಮನ್ನು ಭೇಟಿ ಮಾಡುತ್ತೇನೆ ಎಂದು ತಿಳಿಸಿದ್ದರು.

ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಬೆಳಿಗ್ಗೆ ಪೀಣ್ಯ ಇಸ್ರೋ ಕೇಂದ್ರಕ್ಕೆ ಭೇಟಿ ನೀಡಿ ವಿಜ್ಞಾನಿಗಳ ಜತೆ ಸಮಯ ಕಳೆದು ಅವರನ್ನು ಗೌರವಿಸಿದರು.

ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಶ್ವದಲ್ಲಿ ರಾಷ್ಟ್ರದ ಘನತೆಯನ್ನು ಎತ್ತಿ ಹಿಡಿದ ಇಸ್ರೋ ವಿಜ್ಞಾನಿಗಳನ್ನು ಸೆಪ್ಟಂಬರ್ ಮೊದಲ ವಾರದಲ್ಲಿ ರಾಜ್ಯ ಸರ್ಕಾರ ಸನ್ಮಾನಿಸಲಿದೆ ಎಂದು ಪ್ರಕಟಿಸಿದರು.

ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಿ ಇಸ್ರೋ ವಿಜ್ಞಾನಿಗಳನ್ನು ಸರ್ಕಾರ ಗೌರವಿಸಲಾಗುವುದು. ಇಸ್ರೋ ಅಧ್ಯಕ್ಷ ಸೋಮನಾಥ್ ಸೇರಿದಂತೆ ಕರ್ನಾಟಕದ 500 ವಿಜ್ಞಾನಿಗಳು ಇದರಲ್ಲಿ ಪಾಲ್ಗೊಂಡಿದ್ದು, ಅವರೆಲ್ಲರಿಗೂ ಸನ್ಮಾನಿಸಲಾಗುವುದು. 3 ಲಕ್ಷ 84 ಕಿ.ಮೀ. ಪ್ರಯಾಣ ಮಾಡಿರುವ ವಿಕ್ರಂ ಸಾಧನೆ ಕಡಿಮೆಯಲ್ಲ. ಸರ್ಕಾರದ ಸಹಕಾರ ಬೆಂಬಲ ಇರಲಿದೆ. ಇದು ದೇಶದ ಹೆಮ್ಮೆ ಎಂದರು.

ವಿಜ್ಞಾನಿಗಳು ಹಗಲು ಇರುಳು ಎನ್ನದೆ ಇದಕ್ಕಾಗಿ ಶ್ರಮಿಸಿದ್ದಾರೆ. ದೇಶದ ಒಟ್ಟು ಒಂದು ಸಾವಿರ ವಿಜ್ಞಾನಿಗಳು ಇದರಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಿಂದಲೇ 500 ಜನ ಪಾಲ್ಗೊಂಡಿದ್ದಾರೆ.

ಚಂದ್ರನ ಮೇಲೆ ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಇಳಿದಿರುವುದು ಐತಿಹಾಸಿಕ ಸಾಧನೆ. ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸಬೇಕು. ಇಸ್ರೋ ಸಾಧನೆಯಿಂದ ಇಡೀ ಜಗತ್ತು ಭಾರತದ ಕಡೆಗೆ ನೋಡುವಂತಹ ಕೆಲಸವಾಗಿದೆ ಎಂದರು.

ಜಗತ್ತಿನಲ್ಲಿಯೇ ರಷ್ಯಾ, ಅಮೆರಿಕ, ಚೈನಾ ದೇಶಗಳನ್ನು ಬಿಟ್ಟರೆ ಚಂದ್ರನ ದಕ್ಷಿಣ ಭಾಗದಲ್ಲಿ ಕಾಲಿರಿಸಿರುವ ನಾಲ್ಕನೇ ದೇಶ ಭಾರತ. ನಾವೆಲ್ಲರೂ ಇಸ್ರೋ ಸಾಧನೆಯನ್ನು ಮೆಚ್ಚಿ ಅಭಿನಂದಿಸಬೇಕು ಎಂದು ಅವರು ಹೇಳಿದರು.

# ಹಿಂದೂ ಮಹಾಗಣಪತಿಯ ಹಂದರ ಕಂಬದ ಪೂಜೆ




ಹರಿಹರ, ಅ. 24 - ಗಣೇಶ ಮಹೋತ್ಸವ ಆಚರಣೆಗಾಗಿ ನಗರದ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಹಿಂದೂ ಮಹಾಗಣಪತಿ ಮಹೋತ್ಸವ ಸಮಿತಿಯ ವತಿಯಿಂದ ಗೋ ಪೂಜೆಯೊಂದಿಗೆ ಹಂದರ ಕಂಬದ ಪೂಜೆ ನೆರವೇರಿಸಲಾಯಿತು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಪಂ ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ಬಿಜೆಪಿ ಮುಖಂಡ ಅರ್ಜುನ ಬಿ.ಪಿ. ಹರೀಶ್, ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಶಿವಾನಂದಪ್ಪ ಹಲಸಬಾಳು. ನಗರಸಭೆ ಸದಸ್ಯ ಎ.ಬಿ. ವಿಜಯಕುಮಾರ್, ದಾವಣಗೆರೆ ಜೊಳ್ಳಿ ಗುರು, ಸೀಮೆಎಣ್ಣೆ ಮಲ್ಲೇಶ್, ಸತೀಶ್ ಪೂಜಾರಿ ಸೇರಿದಂತೆ ಹಲವು ಪ್ರಮುಖ ನಾಯಕರು ಗೋವಿಗೆ ಹಾಗೂ ಹಂದರ ಕಂಬಕ್ಕೆ ಪೂಜೆ ಸಲ್ಲಿಸಿದರು.

ಹಿಂದೂ ಮಹಾಗಣಪತಿ ಸಮಿತಿಯ ಅಧ್ಯಕ್ಷ ಎ.ಬಿ. ವಿಜಯಕುಮಾರ್ ಮಾತನಾಡಿ, ಈ ವರ್ಷ ಶ್ರೀ ಹರಿಹರೇಶ್ವರ ದೇವಾಲಯದ ಮಾದರಿಯಲ್ಲಿ ಮಹಾ ಮಂಟಪ ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನ ಅರ್ಚಕ ವೆಂಕಟೇಶ, ಹಿಂದೂ ಜಾಗರಣ ವೇದಿಕೆಯ ದಿನೇಶ್, ಹಿಂದೂ ಮಹಾಗಣಪತಿ ಟ್ರಸ್ಟ್ ಅಧ್ಯಕ್ಷ ಬಸವನಗೌಡ, ಖಜಾಂಚಿ ಗಿರೀಶ್ ಗೌಡ, ಉಪಾಧ್ಯಕ್ಷ ಸ್ವಾತಿ ಹನುಮಂತಪ್ಪ, ಕಾರ್ಯದರ್ಶಿ ಸಂತೋಷ್ ಗುಡಿಮನಿ, ಎಬಿವಿಪಿ ಮುಖಂಡ ವೀರೇಶ್ ಅಜ್ಜಣ್ಣನವರ್, ಚಂದ್ರಕಾಂತ, ಚಂದನ್ ಮೂರ್ಕಲ್, ರಟ್ಟಿಹಳ್ಳಿ ಮಂಜುನಾಥ್, ಮಹೇಶ್, ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ಹಿಂಡಸಘಟ್ಟೆ ಲಿಂಗರಾಜ್, ತುಳಜಪ್ಪ ಭೂತೆ, ಹೆಚ್. ಮಂಜನಾಯ್ಕ್, ರಾಜು ರೋಖಡೆ, ಶಿವಪ್ರಕಾಶ್ ಶಾಸ್ತ್ರಿ, ಧರಣೇಂದ್ರ, ಕೃಷ್ಣಮೂರ್ತಿ ಶೆಟ್ಟಿ, ಅಮರಾವತಿ ಪಾಲಾಕ್ಷಪ್ಪ, ಕಸಾಪ ಗೌರವ ಕಾರ್ಯದರ್ಶಿ ಚಿದಾನಂದ ಕಂಚಿಕೇರಿ, ಅಣ್ಣಪ್ಪ ಲಕ್ಕಶೆಟ್ಟಿಹಳ್ಳಿ, ಸಂತೋಷ, ಆನಂದ್, ಶ್ರೀನಿವಾಸ್ ಚಂದಾಪೂರ್, ಅಂಗಡಿ ಮಂಜುನಾಥ್, ಅಡಕಿ ಕುಮಾರ್, ಹೋವಳೆ ರಾಜ ಗುರು, ಅಣ್ಣಪ್ಪ, ಅಂಬುಜಾ ರಾಜೊಳ್ಳಿ, ಪ್ರಮೀಳಾ ನಲ್ಲೂರು, ರೂಪಾ ಕಾಟ್ವೆ, ಸುಧಾ ಸೋಳಂಕಿ ಮತ್ತಿತರರು ಹಾಜರಿದ್ದರು.

## ಚಂದ್ರ ಚುಂಬನ ಭೂ ಸಂಚಲನ

ಚಂದ್ರಯಾನದ ಕನಸು ನನಸಾಯಿತು
ಇಸ್ರೋ ತಂಡದಿಂದ.
ಯಶಸ್ವಿಯಾಯಿತು ಚಂದ್ರ ಸ್ಪರ್ಶ ಭಾರತದ
ವಿಕ್ರಂ ನೌಕೆಯಿಂದ.

ಚಂದ್ರನನ್ನು ಸ್ಪರ್ಶಿಸಿದ ಮಹಾನ್ ದೇಶಗಳ
ಸಾಲಿನಲ್ಲಿ
ಭಾರತ ಚತುರ್ಥವಾಯಿತು.
ವಿಶ್ವದಲ್ಲಿಯೇ ದಕ್ಷಿಣ ದ್ರುವದಿಂದ
ಚಂದ್ರನನ್ನು ಚುಂಬಿಸಿದ ಪ್ರಥಮ ದೇಶ
ಎನಿಸಿತು.

ಚಂದ್ರ ಯಾನ 2 ರ ಸೋಲು
ವಿಜ್ಞಾನಿಗಳ ಕಣ್ಣೀರು ಇಂದಿಗೂ ಕಣ್ಣಿಗೆ
ಕಟ್ಟಿದಂತಿದೆ.
ಎಡೆ ಬಿಡದ ತ್ರಿವಿಕ್ರಮರಂತೆ ಭಾರತೀಯ
ವಿಜ್ಞಾನಿಗಳು ಪಟ್ಟ ಪರಿಶ್ರಮ ಇಂದು ಫಲ
ನೀಡಿದೆ.

ಭಾರತ ಇನ್ನು ಕೆಲವೇ ವರುಷಗಳಲ್ಲಿ
ವಿಶ್ವ ಗುರು ಎನಿಸುವ ಸೂಚನೆ ಇದಾಗಿದೆ.

ಚಂದ್ರನ ಮೇಲ್ಮೈಯನ್ನು ಪರೀಕ್ಷಿಸುವ
ಕಾರ್ಯ ಯಶಸ್ವಿಯಾಗಲಿ.
ಇಡೀ ವಿಶ್ವವೇ ಭಾರತದೆಡೆಗೆ ನಿಬ್ಬೆರಗಾಗಿ
ನೋಡುವ ಭಾಗ್ಯ ನಮ್ಮದಾಗಲಿ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಬಾವುಟ
ಚಂದ್ರನ ಮೇಲೆ ರಾರಾಜಿಸುತ್ತಿದೆ.
ಇದನ್ನು ಇತರ ಗ್ರಹಗಳ ಮೇಲೂ ಹಾರಿಸಲು
ಇಸ್ರೋ ವಿಜ್ಞಾನಿ ಸಮೂಹ ಕಾಯುತ್ತಿದೆ.

ಆದಿತ್ಯನ ಪ್ರಕಾಶದ ಗುಟ್ಟನ್ನು ಬೇಧಿಸುವ
ಅಧ್ಯಯನದ ಭಾಗ್ಯವೂ ಭಾರತದ್ದಾಗಲಿ.
ಮಂಗಳ ಶುಕ್ರ ಗ್ರಹಗಳನ್ನು ಚುಂಬಿಸುವ
ಭಾಗ್ಯವೂ ನಮ್ಮ ದೇಶಕ್ಕಾಗಲಿ.

- ಡಾ.ಆರತಿ ಸುಂದರೇಶ್, ದಾವಣಗೆರೆ.

## ಭದ್ರಾ ಜಲಾಶಯ

ಇಂದಿನ ಮಟ್ಟ : 165 ಅಡಿ 10 ಇಂಚು
ಒಳ ಹರಿವು: 1533 ಕ್ಯೂಸೆಕ್ಸ್
ಹೊರ ಹರಿವು : 3223 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 185 ಅಡಿ

# ಜೆಜೆಎಂ ವೈದ್ಯ ಕಾಲೇಜಿಗೆ ಬಹುಮಾನ





## ಚೆಸ್ ಪಂದ್ಯ

ದಾವಣಗೆರೆ, ಆ.24- ನಗರದ ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಬೆಳಗಾವಿ ವಲಯ ಆಯೋಜಿಸಿದ 2023 - 24ನೇ ಸಾಲಿನ ಚೆಸ್ ಪಂದ್ಯಾವಳಿಯ ಪುರುಷರ ವಿಭಾಗದಲ್ಲಿ ಹುಬ್ಬಳ್ಳಿಯ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಕಾಲೇಜು ಮೊದಲ ಬಹುಮಾನ ಪಡೆದುಕೊಂಡರೆ, ಬಳ್ಳಾರಿಯ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ದ್ವಿತೀಯ ಬಹುಮಾನ ಪಡೆದುಕೊಂಡಿತು.

ಮಹಿಳೆಯರ ವಿಭಾಗದಲ್ಲಿ ನಗರದ ಜೆಜೆಎಂ ಮೆಡಿಕಲ್ ಕಾಲೇಜು ಪ್ರಥಮ ಬಹುಮಾನ ಪಡೆದುಕೊಂಡರೆ, ಕಾರವಾರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು.

ಈ ಸಂದರ್ಭದಲ್ಲಿ ವಿಜೇತರಿಗೆ ಜೆಜೆಎಂ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ಎಸ್.ಬಿ.ಮುರುಗೇಶ್ ಅವರು ಬಹುಮಾನ ವಿತರಿಸಿ, ವಿಜೇತರಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಡಾ.ನರೇಂದ್ರನಾಥ್, ಡಾ.ಸಂತೋಷಕುಮಾರ್, ಡಾ. ಅಶ್ವಿನಿ, ಡಾ.ನೀತು, ಆರ್ಬಿಟರ್ ನವೀನ್, ರಾಜೀವ್ ಗಾಂಧಿ ವಿವಿಯ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಅಧ್ಯಕ್ಷ ಡಾ.ಜೋಸೆಫ್ ಅನಿಲ್, ರಾಜೀವ್‌ಗಾಂಧಿ ಯೂನಿವರ್ಸಿಟಿ ಬೆಳಗಾವಿ ವಲಯದ ಕೋ ಆರ್ಡಿನೇಟರ್ ಸಿ.ಪಿ.ಮಹೇಶ್, ಜಿ.ಎಂ.ಫಾರ್ಮಸಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಹನುಮಂತಪ್ಪ, ಜೆಜೆಎಂ ಮೆಡಿಕಲ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಕೆ.ಎನ್. ಗೋಪಾಲಕೃಷ್ಣ, ಶಾಂತಕುಮಾರ್ ಇತರರು ಇದ್ದರು.

## ಸಕ್ಕರೆ ರಫ್ತು ನಿಷೇಧ ಸಾಧ್ಯತೆ?

(1ನೇ ಪುಟದಿಂದ) ಸಕ್ಕರೆ ದಾಸ್ತಾನಿದೆ. ದೇಶದಲ್ಲಿ 275 ಲಕ್ಷ ಟನ್ ಸಕ್ಕರೆ ಬೇಡಿಕೆ ಇದೆ. 50 ಲಕ್ಷ ಟನ್ ಅನ್ನು ಎಥೆನಾಲ್ ಉತ್ಪಾದನೆಗೆ ಬಳಸಲಾಗುತ್ತದೆ ಎಂದವರು ತಿಳಿಸಿದ್ದಾರೆ.

ಹೀಗಾಗಿ ದೇಶೀಯ ಬೇಡಿಕೆ ಈಡೇರಿಸಲು ಸಕ್ಕರೆ ರಫ್ತಿನ ಮೇಲೆ ನಿಷೇಧ ಹೇರುವ ಸಾಧ್ಯತೆ ಇದೆ. ಭಾರತ ನಿಯಮಿತವಾಗಿ ಸಕ್ಕರೆ ರಫ್ತು ಮಾಡುವುದಿಲ್ಲ. ಕಳೆದ ಎರಡು ವರ್ಷಗಳಲ್ಲಿ ಜಾಗತಿಕವಾಗಿ ಸಕ್ಕರೆ ಕೊರತೆಯಾಗಿತ್ತು. ಆಗ ಭಾರತದಿಂದ 60 ಲಕ್ಷ ಟನ್ ರಫ್ತು ಮಾಡಲಾಗಿತ್ತು ಎಂದವರು ಹೇಳಿದರು. ಸಕ್ಕರೆ ಉತ್ಪಾದನೆಯಲ್ಲಿ ಕುಂಠಿತವಾದರೂ ಎಥೆನಾಲ್ ಉತ್ಪಾದನೆಯ ಗುರಿ ತಲುಪಲಾಗುವುದು ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿಂದು ಚೌಡೇಶ್ವರಿ ರಥೋತ್ಸವ

ದಾವಲ್ ಪೇಟೆಯ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಶ್ರೀ ಚೌಡೇಶ್ವರಿ ಅಮ್ಮನವರ 43ನೇ ವರ್ಷದ ಶ್ರಾವಣ ಮಾಸದ ರಥೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಇಂದು ನಡೆಯಲಿದೆ.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಬೆಳಿಗ್ಗೆ 10-30 ಕ್ಕೆ ತೊಗಟವೀರ ಸಮುದಾಯ ಭವನದಲ್ಲಿ ಕುಲ ಗುರು ಶ್ರೀ ದಿವ್ಯಜ್ಞಾನಾ ನಂದಗಿರಿ ಸ್ವಾಮೀಜಿಯವರ ದಿವ್ಯಸಾನ್ನಿಧ್ಯದಲ್ಲಿ ಜರುಗಲಿದೆ.

## ಶ್ರೀ ಸಿದ್ಧಾರೂಢ ಮಠದಲ್ಲಿ ಪುರಾಣ ಪ್ರವಚನ

ರಾಣೇಬೆನ್ನೂರು, ಆ.24- ಹೊಸನಗರ ಶ್ರೀ ಗುರು ಕಬೀರಾನಂದ ಸ್ವಾಮಿ ಸಿದ್ಧಾಶ್ರಮದ ಶ್ರೀ ಸಿದ್ಧಾರೂಢ ಮಠದಲ್ಲಿ ಇದೇ ದಿನಾಂಕ 31ರಿಂದ ಸೆ.14ರವರೆಗೆ ಶ್ರೀ ಸಿದ್ಧಾರೂಢ ಚರಿತ್ರೆ ಪುರಾಣ ನಡೆಯಲಿದೆ.

# ಬೆಂಗಳೂರು ಹೆಚ್.ಸಿ.ಜಿ. ಕ್ಯಾನ್ಸರ್ ಕೇಂದ್ರದಿಂದ ಯಶಸ್ವಿ ಯಕೃತ್ ಕಸಿ



ದಾವಣಗೆರೆ, ಆ. 24- ಬೆಂಗಳೂರಿನ ಹೆಚ್‌ಸಿಜಿ ಕ್ಯಾನ್ಸರ್ ಕೇಂದ್ರದ ಹೆಚ್‌ಪಿಬಿ ಮತ್ತು ಪಿತ್ತ ಜನಕಾಂಗ ಕಸಿ ಶಸ್ತ್ರಚಿಕಿತ್ಸಕ ಡಾ. ಬಸಂತ್ ಮಹದೇವಪ್ಪ ನೇತೃತ್ವದ ವೈದ್ಯರ ತಂಡ ನಗರದ 47 ವರ್ಷದ ನಂಜಪ್ಪ ಎಂಬುವರಿಗೆ ಯಕೃತ್ ಕಸಿಯನ್ನು ಯಶಸ್ವಿಯಾಗಿ ನಡೆಸಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ.ಬಸಂತ್ ಮಹದೇವಪ್ಪ ಅವರು, ಆಲ್ಕೋಹಾಲ್ ರಹಿತ ಸ್ಟಿಟೋಹೆಪಟೈಟಸ್ (ಎನ್‌ಎಎಸ್‌ಎಚ್) ಮತ್ತು ಮಧುಮೇಹದಿಂದ ಉಂಟಾಗುವ ಯಕೃತ್ ವೈಫಲ್ಯದ ವಿರುದ್ಧ ಹೋರಾಡಿ ಜಯಿಸಿದ ನಂಜಪ್ಪ ಅವರು ಶಸ್ತ್ರಚಿಕಿತ್ಸೆ ನಂತರವೂ ಆರೋಗ್ಯವಾಗಿದ್ದಾರೆ ಎಂದರು.

ಅನೇಕ ಸವಾಲುಗಳನ್ನು ಎದುರಿಸಿದ ನಂಜಪ್ಪ ಅವರು ಆರಂಭದಲ್ಲಿ 2017 ಆಗಸ್ಟ್ ತಿಂಗಳಲ್ಲಿ ಬೆಂಗಳೂರಿನ ಹೆಚ್‌ಸಿಜಿ ಕ್ಯಾನ್ಸರ್ ಕೇಂದ್ರದಲ್ಲಿ ಚಿಕಿತ್ಸೆ ಪಡೆದರು. ಕಾಮಾಲೆ ಮತ್ತು ಕಿಬ್ಬೊಟ್ಟೆಯ ಹಿಗ್ಗುವಿಕೆಯೊಂದಿಗೆ ವಾಂತಿ, ರಕ್ತ ಮತ್ತು ಪ್ರಜ್ಞಾಹೀನತೆಯ ಅನೇಕ ಸಮಸ್ಯೆಗಳಿಂದ ಅವರು ಹೋರಾಡಿದರು. ಅವರ ಜೀವನದ ಗುಣಮಟ್ಟ ಕೂಡ ಹದಗೆಟ್ಟಿತ್ತು. ಈ ರೋಗ ಲಕ್ಷಣಗಳಿಂದ ಆಹಾರ ಸೇವನೆಯನ್ನು ಕಡಿಮೆಯಾಗುವಂತೆ ಮಾಡಿತು. ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರಿತು. ಕೃಷಿಕನಾಗಿದ್ದ ನಂಜಪ್ಪ ಅವರಿಗೆ ದೈನಂದಿನ ಜವಾಬ್ದಾರಿಯನ್ನು ನಿಭಾಯಿಸಲು ಸಹ ಕಷ್ಟವಾಯಿತು ಎಂದು ವಿವರಿಸಿದರು.

ನಂಜಪ್ಪ ಅವರ ಆರೋಗ್ಯವನ್ನು ಯಥಾಸ್ಥಿತಿಗೆ ತರಲು ವೈದ್ಯರು ತಮ್ಮ ಚಿಕಿತ್ಸೆಯನ್ನು ಆರಂಭಿಸಿದರು. ನಂಜಪ್ಪ ಕೂಡ ನನ್ನ ಹಾಗೂ ವೈದ್ಯರ ತಂಡದ ಮೇಲೆ ನಂಬಿಕೆ ಇಟ್ಟಿದ್ದರು. ಯಕೃತ್ ಕಸಿ ಅತ್ಯಂತ ಕಾರ್ಯಸಾಧುವಾದ ಪರಿಹಾರ ಎಂದು ವೈದ್ಯರು ನಿರ್ಧರಿಸಿದರು. ವೈದ್ಯರ ತಂಡ ಯಕೃತ್ ಕಸಿಯ ನ್ನು ಯಶಸ್ವಿಯಾಗಿ ನಿರ್ವಹಿಸಿತು. ನಂಜಪ್ಪ ಅವರ ಆರೋಗ್ಯ ಚೇತರಿಕೆಯ ಲಕ್ಷಣವನ್ನು ಸಹ ಕಂಡಿತು ಎಂದು ಹೇಳಿದರು.

ದಾವಣಗೆರೆಯವರೇ ಐವರು ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು. ಅವರೆಲ್ಲರೂ ಸಹ ಗುಣಮುಖರಾಗುತ್ತಿದ್ದಾರೆಂದು ಮಾಹಿತಿ ನೀಡಿದರು.

ಯಕೃತ್ ವೈಫಲ್ಯ ತಡೆಗಟ್ಟಲು ಸರಿಯಾದ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು, ಮಿತ ಆಹಾರದ ಕಡೆ ಗಮನ ಕೊಡುವುದು. ಮದ್ಯಪಾನದಿಂದ ದೂರವಿರುವುದು, ನಿತ್ಯ ವ್ಯಾಯಮ, ಉತ್ತಮ ನಡಿಗೆ, ಯೋಗ ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದರು.

## ಎಸ್.ಟಿ.ಜೆ. ಕಾಲೇಜ್‌ಗೆ ಫಲಿತಾಂಶ

ರಾಣೇಬೆನ್ನೂರು, ಆ. 24 - ನಗರದ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ 3 ನೇ ವರ್ಷದ ಬಿ. ಇ. ಫಲಿತಾಂಶ ಪ್ರಕಟವಾಗಿದ್ದು ಮೆಕ್ಯಾನಿಕಲ್ ಶೇ 100, ಸಿವಿಲ್ ಶೇ 90, ಇನ್ಫರ್ಮೇಷನ್ ಸೈನ್ಸ್ ಶೇ 86, ಕಂಪ್ಯೂಟರ್ ಸೈನ್ಸ್ ಶೇ 76, ಎಲೆಕ್ಟ್ರಿಕಲ್ ಶೇ 71, ಎಲೆಕ್ಟ್ರಾನಿಕ್ಸ್ ಶೇ 57 ತೇರ್ಗಡೆಯಾಗಿದ್ದಾರೆ.

ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಬಿ. ಶಿವಕುಮಾರ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

## ಮುರುಘಾ ಮಠದಲ್ಲಿ ಇಂದು ವಚನಾಭಿಷೇಕ

ಚಿತ್ರದುರ್ಗ ಮುರುಘಾ ಮಠದಲ್ಲಿ ಕರ್ತೃಗದ್ದುಗೆಗೆ ಇಂದಿನಿಂದ 1 ತಿಂಗಳ ಕಾಲ ಪ್ರತಿನಿತ್ಯ ಬೆಳಗ್ಗೆ ವಚನಾಭಿಷೇಕ ಜರುಗಲಿದೆ ಎಂದು ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದ್ದಾರೆ. ಇಂದಿನಿಂದ ಪ್ರತಿದಿನ ಅಥವಾ ವಾರಕ್ಕೆ ಎರಡು ದಿನ ಚಿಂತನ ಶ್ರಾವಣ ನಡೆಯಲಿದೆ.

## ನಗರದಲ್ಲಿ ಇಂದು ಕ್ರೀಡಾಕೂಟ

ಇದೇ ದಿನಾಂಕ 29 ರಂದು ಮೇಜರ್ ಧ್ಯಾನ್‌ಚಂದ್ ಅವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲಾಗುತ್ತಿದ್ದು, ಸ್ಥಳೀಯ ಪ್ರಚಲಿತ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶ್ರೀಹರ್ಷ ತಿಳಿಸಿದ್ದಾರೆ. ರಸ್ತೆ ಓಟ (ಪುರುಷ-6ಕಿ.ಮೀ) (ಮಹಿಳೆ–3ಕಿ.ಮೀ) ಕ್ರೀಡೆ ಇದೇ ದಿನಾಂಕ 25 ರಂದು ಜಿಲ್ಲಾ ಕ್ರೀಡಾಂಗಣದಿಂದ ಪ್ರಾರಂಭವಾಗುತ್ತದೆ. ಬೆಳಿಗ್ಗೆ 7.30 ಗಂಟೆಗೆ ವರದಿ ಮಾಡಿಕೊಳ್ಳಬೇಕು. (ವಿನೋದ್‌ಕುಮಾರ್. ಕೆ. ಮೊ.ನಂ: 8971388143) ಹಗ್ಗ ಜಗ್ಗಾಟ ಕ್ರೀಡೆಯನ್ನು ಆಗಸ್ಟ್ 29 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದು, ಬೆಳಿಗ್ಗೆ 7.30 ಗಂಟೆಗೆ ವರದಿ ಮಾಡಿಕೊಳ್ಳಬೇಕು. (ರಾಮಲಿಂಗಪ್ಪ. ಜೆ. ಮೊ.ನಂ: 9480796263)

ಖೋ-ಖೋ ಕ್ರೀಡೆಯನ್ನು ಆಗಸ್ಟ್ 29 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದು, ಬೆಳಿಗ್ಗೆ 9.30 ಗಂಟೆಗೆ ವರದಿ ಮಾಡಿಕೊಳ್ಳಬೇಕು (ಸುನೀತಾ ಎಂ.ಸಿ. ಮೊ.ನಂ: 9972464313)

## ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಆ.24- ನಗರದ ಉದ್ಯಮಿ ಪಲ್ಲಾಗಟ್ಟೆ ಮಲ್ಲಿಕಾರ್ಜುನ್ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.


COMMERCIAL COMPLEX FOR RENT
Hadadi Main Road
Nearly 2000 sqft.
(Previously Canara Bank)Synidcate Bank.
Specially for Bank, Insurance,
Financial Institutions. (Broker's Excuse)
Contact : 98444 40988

125th BIRTH ANNIVERSARY DR TMA PAI
Manipal ArogyaCard
ಮಣಿಪಾಲ ಆರೋಗ್ಯಕಾರ್ಡ್
ಸಂಪೂರ್ಣ ಕುಟುಂಬಕ್ಕಾಗಿ
ಶ್ರೇಷ್ಠ ಮೌಲ್ಯ. ವಿಶ್ವಾಸಾರ್ಹ ಸೇವೆ.
ಎರಡು ವರ್ಷದ ಸುರಕ್ಷಾ ಅವಧಿಯೊಂದಿಗೆ
ನಿಮ್ಮ ಆರೋಗ್ಯಕಾರ್ಡ್ ಆಪ್ ಡೌನ್ಲೋಡ್ ಮಾಡಲು
ಹೊರ ರೋಗಿ ಮತ್ತು ಒಳ ರೋಗಿ ವಿಭಾಗದಲ್ಲಿ ರಿಯಾಯಿತಿ ಸೌಲಭ್ಯ
ಹೊರ ರೋಗಿ ವಿಭಾಗ
- ಸಮಾಲೋಚನೆ ಶುಲ್ಕ (ನಾನ್ ಒಪಿಡಿ ದಿನಗಳನ್ನು ಹೊರತುಪಡಿಸಿ)
- ಡಯಾಲಿಸಿಸ್ ಶುಲ್ಕ
- ಪ್ರಯೋಗಾಲಯ ಶುಲ್ಕ
- ಕಾರ್ಯವಿಧಾನಗಳು ಮತ್ತು ಮಧುಮೇಹ ಪಾದದ ತಪಾಸಣೆ ಶುಲ್ಕ
- ರೇಡಿಯಾಲಜಿ ಶುಲ್ಕ (ಕನ್ಸೂಮೇಬಲ್ಸ್ ಹೊರತುಪಡಿಸಿ)
- ಔಷಧಾಲಯ ಶುಲ್ಕ
ಒಳ ರೋಗಿ ವಿಭಾಗ
- ಜನರಲ್ ವಾರ್ಡ್ (ಔಷಧಿ ಮತ್ತು ಕನ್ಸೂಮೇಬಲ್ಸ್ ಹೊರತುಪಡಿಸಿ)
- ಹೆರಿಗೆ ವಿಭಾಗದ ಸೌಲಭ್ಯ (ಜನರಲ್ ವಾರ್ಡ್ ಸೌಲಭ್ಯದ ಪ್ರಕಾರ)
ನಿಮ್ಮ ಕುಟುಂಬದ ಆರೋಗ್ಯ ಸೇವಾ ಅಗತ್ಯತೆಗಳಿಗಾಗಿ ಇಂದೇ ನೋಂದಾಯಿಸಿಕೊಳ್ಳಿರಿ
ಸ್ವಯಂ ನೋಂದಾವಣೆಗೆ
ಷರತ್ತುಗಳು ಅನ್ವಯಿಸುತ್ತವೆ
ನೋಂದಾವಣೆಗೆ ಮತ್ತು ಹೆಚ್ಚಿನ ಮಾಹಿತಿಗಾಗಿ
www.manipalhealthcard.com
Ph: 0820-2923748 / 99808 54700
ರಿಯಾಯಿತಿ ಲಭ್ಯವಿರುವ ಆಸ್ಪತ್ರೆಗಳು: ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲ | ಡಾ. ಟಿಎಂಎ ಪೈ ಆಸ್ಪತ್ರೆ, ಉಡುಪಿ | ಡಾ. ಟಿಎಂಎ ಪೈ ರೋಟರಿ ಆಸ್ಪತ್ರೆ, ಕಾರ್ಕಳ | ಕೆ.ಎಮ್.ಸಿ. ಆಸ್ಪತ್ರೆ ಅಂಬೇಡ್ಕರ್ ವೃತ್ತ ಹಾಗೂ ಕೆ.ಎಮ್.ಸಿ. ಆಸ್ಪತ್ರೆ ಅತ್ತಾವರ, ಮಂಗಳೂರು | ದುರ್ಗಾ ಸಂಜೀವನಿ ಮಣಿಪಾಲ ಆಸ್ಪತ್ರೆ, ಕಟೀಲು | ಮಣಿಪಾಲ ಆಸ್ಪತ್ರೆ ಗೋವಾ

॥ ಸಿರಿಗನ್ನಡಂ ಗೆಲ್ಗೆ॥
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ ಹಾಗೂ
ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ (ರಿ.) ದಾವಣಗೆರೆ
ಸ್ಥಾಪಿತ ರಾಜ್ಯಮಟ್ಟದ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ
ಪ್ರಶಸ್ತಿ ಪ್ರದಾನ ಸಮಾರಂಭ
ದಿವ್ಯ ಸಾನ್ನಿಧ್ಯ ಹಾಗೂ ಉದ್ಘಾಟನೆ : ಪರಮಪೂಜ್ಯ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು ಶ್ರೀ ಬಸವತತ್ವ ಪೀಠ, ಚಿಕ್ಕಮಗಳೂರು.
ಅಧ್ಯಕ್ಷತೆ : ಶರಣ ಎಂ.ಬಿ. ಸಂಗಮೇಶ್ವರ ಗೌಡರು ಅಧ್ಯಕ್ಷರು, ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ (ರಿ.) ದಾವಣಗೆರೆ.
ಪ್ರಶಸ್ತಿ ಪ್ರದಾನ ಹಾಗೂ ಅಭಿನಂದನಾ ನುಡಿ : ನಾಡೋಜ ಡಾ. ಮನು ಬಳಿಗಾರ್ ನಿಕಟಪೂರ್ವ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಸದಸ್ಯರು, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.
ಪ್ರಶಸ್ತಿ ಪುರಸ್ಕೃತರು : ಡಾ. ಬಿ.ಟಿ. ಲಲಿತಾ ನಾಯ್ಕ್ ಮಾಜಿ ಸಚಿವರು ಹಾಗೂ ಸಾಹಿತಿಗಳು, ಬೆಂಗಳೂರು.
ಪ್ರಾಸ್ತಾವಿಕ ನುಡಿ : ಶರಣ ಬಿ. ವಾಮದೇವಪ್ಪ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.
ಶರಣ ಮಾಗನೂರು ಬಸಪ್ಪನವರ ವ್ಯಕ್ತಿತ್ವ ಕುರಿತು : ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ನಿಕಟಪೂರ್ವ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ.
ದಿನಾಂಕ : 26.08.2023ರ ಶನಿವಾರ, ಬೆಳಗ್ಗೆ : 11.00 ಗಂಟೆಗೆ
ಸ್ಥಳ : ಕುವೆಂಪು ಕನ್ನಡ ಭವನ, ವಿದ್ಯಾನಗರ ರಸ್ತೆ, ದಾವಣಗೆರೆ-4.
ವಚನಗೀತೆ ಹಾಗೂ ನಾಡಗೀತೆ : ಮಾಗನೂರು ಬಸಪ್ಪ ಶಾಲಾ ಮಕ್ಕಳಿಂದ
ಸರ್ವರಿಗೂ ಸುಸ್ವಾಗತ

# ಕೊನೆ ಭಾಗಕ್ಕೆ ತಲುಪದ ಭದ್ರಾ ನೀರು ಮಲೇಬೆನ್ನೂರಿನ ರೈತರ ಆಕ್ರೋಶ



ಮಲೇಬೆನ್ನೂರು, ಆ.24- ಭದ್ರಾ ನಾಲೆಯಲ್ಲಿ ನೀರು ಬಿಡುಗಡೆಗೊಂಡು 13 ದಿನ ಕಳೆದಿದ್ದರೂ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ಇನ್ನೂ ನೀರು ತಲುಪಿಲ್ಲ ಎಂದು ರೈತರು ಗುರುವಾರ ಮಲೇಬೆನ್ನೂರಿನ ನೀರಾವರಿ ಕಚೇರಿ ಎದುರು ಆಕ್ರೋಶ ವ್ಯಕ್ತಪಡಿಸಿದರು.

ಕೆ.ಎನ್.ಹಳ್ಳಿ, ಕೊಕ್ಕನೂರು, ಪಾಳ್ಯ, ಸಿರಿಗೆರೆ, ಭಾನುವಳ್ಳಿ, ಕಮಲಾಪುರ ಭಾಗಗಳಿಗೆ ಕನಿಷ್ಠ ನೀರು ಬಂದಿಲ್ಲ. ಆರಂಭದಲ್ಲೇ ಹಿಂಗಾದರೆ ಮುಂದೆ ನಮ್ಮ ಗತಿ ಏನೆಂದು? ರೈತರು ಎಇಇ ಧನುಂಜಯ ಅವರನ್ನು ಪ್ರಶ್ನಿಸಿದರು. ಮೇಲ್ಭಾಗದಲ್ಲಿ ಎಲ್ಲಾ ರೈತರು ಭತ್ತದ ನಾಟಿ ಮಾಡುತ್ತಿದ್ದಾರೆ. ನಾವು ಯಾವಾಗ ಸಸಿ ನಾಮಡಿ ಬೆಳೆಸಿ ನಾಡಿ ಮಾಡಬೇಕೆಂದು ರೈತರು ಕೇಳಿದರು.

ರೋಟೇಷನ್ ಪದ್ಧತಿ ಪ್ರಕಾರ ಕಾಲುವೆಗಳಿಗೆ ನೀರು ಹರಿಸಲಾಗುವುದು. ದಿನದಲ್ಲಿ ಎಲ್ಲಾ ಭಾಗಗಳಿಗೆ ನೀರು ತಲುಪಿಸುತ್ತೇವೆ ಎಂದು ಎಇಇ ಧನುಂಜಯ ರೈತರಿಗೆ ಭರವಸೆ ನೀಡಿದರು. ವಿಷಯ ತಿಳಿದ ನಂದಿಗಾವಿ ಶ್ರೀನಿವಾಸ್ ಕೂಡಾ ಸ್ಥಳಕ್ಕೆ ಆಗಮಿಸಿ, ರೈತರ ಪರವಾಗಿ ಇಂಜಿನಿಯರ್ ಜೊತೆ ಚರ್ಚಿಸಿದರು.

## ಬನಶಂಕರಿ ದೇವಿ ಪ್ರತಿಷ್ಠಾಪನೆ ವಾರ್ಷಿಕೋತ್ಸವ



**ನಗರದಲ್ಲಿ ಇಂದು**

ಹಳೆ ಬೇತೂರು ರಸ್ತೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ 5ನೇ ವರ್ಷದ ಶ್ರೀ ಬನಶಂಕರಿ ದೇವಿ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಕಾರ್ಯಕ್ರಮವು ಇಂದು ನಡೆಯಲಿದೆ. ಬೆಳಿಗ್ಗೆ ದೀಪಾರಾಧನೆ, ಪಂಚಾಮೃತ ಅಭಿಷೇಕ, ದುರ್ಗಾ ಹೋಮ, ಗಾಯತ್ರಿ ಹೋಮ, ಶಾಂತಿ ಹೋಮ ನಂತರ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಜರುಗಲಿದೆ.

# 'ಚಾರ್ಲಿ 777' ಕನ್ನಡದ ಅತ್ಯುತ್ತಮ ಚಿತ್ರ



ನವದೆಹಲಿ, ಆ. 24 – 69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, 'ರಾಕೆಟ್ರಿ : ದಿ ನಂಬಿ ಎಫೆಕ್ಟ್' ಹಿಂದಿ ಚಿತ್ರ ಅತ್ಯುತ್ತಮ ಚಲನಚಿತ್ರ ಎಂಬ ಪ್ರಶಸ್ತಿ ಗಳಿಸಿದೆ.

ನಿಖಿಲ್ ಮಹಾಜನ್ ಅವರು ಮರಾಠಿ ಚಿತ್ರ 'ಗೋದಾವರಿ'ಗಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪಡೆದಿದ್ದಾರೆ. 'ಚಾರ್ಲಿ 777' ಕನ್ನಡದ ಅತ್ಯುತ್ತಮ ಚಲನಚಿತ್ರ ಎಂಬ ಪ್ರಶಸ್ತಿಗೆ ಪಾತ್ರವಾಗಿದೆ.

ನಟ ಅಲ್ಲು ಅರ್ಜುನ್ (ಪುಷ್ಪ - 1), ಆಲಿಯಾ ಭಟ್ (ಗಂಗೂಬಾಯಿ ಕಾಠಿಯಾವಾಡಿ) ಹಾಗೂ ಕೃತಿ ಸನೂನ್ (ಮಿಮಿ) ಅವರು ಅತ್ಯುತ್ತಮ ನಟ – ನಟಿ ವಿಭಾಗದಲ್ಲಿ ಪ್ರಶಸ್ತಿ ಗಳಿಸಿದ್ದಾರೆ. ಪಂಕಜ್ ತ್ರಿಪಾಠಿ ಹಾಗೂ ಪಲ್ಲವಿ ಜೋಷಿ ಅವರು ಅತ್ಯುತ್ತಮ ಸಹ ನಟರ ವಿಭಾಗದಲ್ಲಿ ಗೌರವ ಪಡೆದಿದ್ದಾರೆ.

ವಿವೇಕ್ ಅಗ್ನಿಹೋತ್ರಿ ಅವರ 'ದಿ ಕಾಶ್ಮೀರ್ ಫೈಲ್ಸ್' ಚಿತ್ರ ರಾಷ್ಟ್ರೀಯ ಭಾವೈಕ್ಯತೆಯ ನರ್ಗೀಸ್ ದತ್ ಪ್ರಶಸ್ತಿ ಪಡೆದಿದೆ.

ಆರ್.ಆರ್.ಆರ್. ಚಿತ್ರಕ್ಕಾಗಿ ಎಂ.ಎಂ. ಕೀರವಾಣಿ ಅತ್ಯುತ್ತಮ ಸಂಗೀತ ನಿರ್ದೇಶಕ ಪ್ರಶಸ್ತಿ ಪಡೆದಿದ್ದಾರೆ. ಜನಪ್ರಿಯ ಚಲನಚಿತ್ರ ವಿಭಾಗ, ಅತ್ಯುತ್ತಮ ಹಿನ್ನೆಲೆ ಗಾಯನಕ್ಕಾಗಿ ಇದೇ ಚಿತ್ರದ ಕಾಲಭೈರವ, ಅತ್ಯುತ್ತಮ ವಿಶೇಷ ಪರಿಣಾಮ, ಛಾಯಾಗ್ರಹಣ ಸೇರಿದಂತೆ ಆರು ವಿಭಾಗಗಳಲ್ಲಿ ಆರ್.ಆರ್.ಆರ್. ಪ್ರಶಸ್ತಿ ಪಡೆದಿದೆ.

# ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸಿದ ಶಾಸಕ ಕೆ.ಎಸ್.ಬಸವಂತಪ್ಪ

ದಾವಣಗೆರೆ, ಆ.24- ಚಂದ್ರನ ಅಂಗಳದಲ್ಲಿ ವಿಕ್ರಮ್ ಲ್ಯಾಂಡರ್‌ನ್ನು ಯಶಸ್ವಿಯಾಗಿ ಇಳಿಸಿ, ಕೋಟ್ಯಂತರ ಭಾರತೀಯರ ಕನಸನ್ನು ಇಸ್ರೋ ವಿಜ್ಞಾನಿಗಳು ನನಸು ಮಾಡಿದ್ದಾರೆ ಎಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಸಂತಸ ವ್ಯಕ್ತಪಡಿಸಿದ್ದಾರೆ.

ಇದೇ ರೀತಿಯಾಗಿ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿ ಭಾರತವನ್ನು ವಿಶ್ವ ಮಟ್ಟದಲ್ಲಿ ಮುಂಚೂಣಿ ರಾಷ್ಟ್ರವನ್ನಾಗಿ ಮಾಡುವಂತೆ ವಿಜ್ಞಾನಗಳಿಗೆ ಶುಭ ಹಾರೈಸಿದ್ದಾರೆ.

# ಬಾಲಕನ ಮೇಲೆ ಬೀದಿ ನಾಯಿಗಳ ದಾಳಿ

**ಬೀದಿ ನಾಯಿಗಳ ನಿಯಂತ್ರಣಕ್ಕೆ ಆಗ್ರಹ**



ದಾವಣಗೆರೆ, ಆ. 24- ಮಹಾನಗರ ಪಾಲಿಕೆ ವ್ಯಾಪ್ತಿಯ 18ನೇ ವಾರ್ಡ್ ಕಾಯಿಪೇಟೆಯ ಶಾಂತಪ್ಪ ಬೆಣ್ಣೆ ದೋಸೆ ಹೋಟೆಲ್ ಹತ್ತಿರ ಬಾಲಕನ ಮೇಲೆ ಬೀದಿ ನಾಯಿಗಳು ದಾಳಿ ಮಾಡಿದ್ದು, ಬಾಲಕನ ಕೈ ಹಾಗೂ ಕಾಲಿಗೆ ಕಚ್ಚಿವೆ. ದಾವಣಗೆರೆ ನಗರದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಮಹಾನಗರ ಪಾಲಿಕೆ ಅಧಿಕಾರಿಗಳು ಮಾತ್ರ ಮೌನ ವಹಿಸಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.


॥ ಶ್ರೀ ಶಿವನಾರದಮುನಿ ಪ್ರಸನ್ನ ॥

4ನೇ ವರ್ಷದ ಪುಣ್ಯಸ್ಮರಣೆ



ದಿ॥ ಸಾವಕ್ಕರ ಶ್ರೀಮತಿ ಬಸಮ್ಮನವರು

(ದಿ॥ ಶ್ರೀ ಸಾವಕ್ಕರ ಕೊಟ್ರಪ್ಪನವರ ಧರ್ಮಪತ್ನಿ)

ಪೂಜ್ಯರೇ,

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷವಾಯಿತು.
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನೀವು ಹಾಕಿಕೊಟ್ಟ
ಮಾರ್ಗದಲ್ಲಿ ಮುನ್ನಡೆಯುತ್ತ ಸದಾ ನಿಮ್ಮ ಸ್ಮರಣೆಯಲ್ಲಿರುವ

* ಶ್ರೀಮತಿ ಸಾವಕ್ಕ ನಿರ್ಮಲಾ ಮತ್ತು ಶ್ರೀ ಎಸ್.ಬಸವರಾಜಪ್ಪ ಶಾಮನೂರು
* ಶ್ರೀಮತಿ ಸಾವಕ್ಕ ಶಶಿಕಲಾ ಮತ್ತು ಶ್ರೀ ಎಸ್ ಎಸ್.ಸಿದ್ದಪ್ಪ ಮತ್ತು ಮಕ್ಕಳು
* ಶ್ರೀಮತಿ ನಾರಮ್ಮ ಲೇ॥ ಬಸವರಾಜಪ್ಪ ಅನೆಕೊಂಡ (ಮಗಳು)
* ಶ್ರೀಮತಿ ಸಾವಕ್ಕ ಭಾರತಿ ಮತ್ತು ಶ್ರೀ ಲಿಂಗರಾಜು ಮತ್ತು ಮಕ್ಕಳು
* ಸಾವಕ್ಕ ವಂಶಸ್ಥರು ಶಾಮನೂರು
* ಬೈನ್ನೂರು ವಂಶಸ್ಥರು ಅನೆಕೊಂಡ ಮತ್ತು ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು ವರ್ಗ, ಶಾಮನೂರು



ಭಾಗ್ಯರಂಗ ಚಿಟ್ಸ್ ಪ್ರೈ. ಲಿಮಿಟೆಡ್

ಪಿ.ಬಿ.ರೋಡ್, ದಾವಣಗೆರೆ–577002. ಮೊ : 7760815577

ನಮ್ಮೆಲ್ಲಾ ಗ್ರಾಹಕರು ಸತತ 18 ವರ್ಷಗಳಿಂದ ನಮ್ಮ ಕಂಪನಿಯ ಜೊತೆ ಸಹಕರಿಸಿ ಇಲ್ಲಿಯವರೆಗೂ ಕಷ್ಟ ಸುಖಗಳಲ್ಲಿ ಭಾಗಿಯಾಗಿ ನಮ್ಮನ್ನು ಮುಂದುವರಿಯಲು ಸಹಕರಿಸಿದ ಎಲ್ಲಾ ಗ್ರಾಹಕರಿಗೆ

"ವರಮಹಾಲಕ್ಷ್ಮಿ"

ಹಬ್ಬದ ಹಾರ್ದಿಕ ಶುಭಾಶಯಗಳು

ಹೊಸ ಯೋಜನೆಗಳನ್ನು ಪ್ರಾರಂಭಿಸಿದ್ದೇವೆ. ಸದಸ್ಯತ್ವದ ಜೊತೆಗೆ ಆಕರ್ಷಕ ಬಹುಮಾನದ ಕೂಪನ್‌ಗಳನ್ನು ಪಡೆಯಿರಿ.



ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ)
ಹಿಂದೂ ವಧು-ವರರ ಮಾಹಿತಿ ಕೇಂದ್ರ

ಎಸ್.ಜಿ.ಎಂ. ಟೂರ್ಸ್

ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.

ವಿಮಾನ ಮತ್ತು ಬಸ್ಸಿನಲ್ಲಿ 14 ದಿನಗಳ ಚಾರ್‌ಧಾಮ್ ವಿಶೇಷ ಯಾತ್ರೆ

(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ.20,000 ಸಬ್ಸಿಡಿ ಇರುತ್ತದೆ)*

ಸಂದರ್ಶಿಸುವ ಸ್ಥಳಗಳು : ನವದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ,

ಹೊರಡುವ ದಿನಾಂಕ 25-09-2023

ಬುಕ್ಕಿಂಗ್ ಕೊನೆ ದಿನಾಂಕ 30-08-2023



ಸಂಚಾಲಕರು
ವೇ॥ ಲೋಕೇಶಯ್ಯ ಎಂ.
9448159303
7892510652
8050952637




ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪ್ ಸೊಸೈಟಿ ನಿಯಮಿತ, ಹರಿಹರ.

ದಿನಾಂಕ : 23.08.2023 ರಂದು ನಡೆದ ಸೊಸೈಟಿಯ ನೂತನ ಅಧ್ಯಕ್ಷರ-ಉಪಾಧ್ಯಕ್ಷರ ಚುನಾವಣೆಯಲ್ಲಿ ನಮ್ಮನ್ನು (ಅಧ್ಯಕ್ಷರಾಗಿ ಶ್ರೀ ಡಿ. ಯೋಮಕೇಶ್ವರಪ್ಪ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ನೀಲಮ್ಮ ಎಂ. ಮಂಜಪ್ಪ) ಅವಿರೋಧವಾಗಿ ಆಯ್ಕೆ ಮಾಡಿದ ಸಂಘದ ನೂತನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಸಮಾಜದ ಮುಖಂಡರಿಗೆ ಮತ್ತು ಚುನಾವಾಧಿಕಾರಿಯಾದ ಶ್ರೀಮತಿ ಹೆಚ್. ಸುನೀತಾ ಇವರಿಗೂ

ತುಂಬು ಹೃದಯದ ಕೃತಜ್ಞತೆಗಳು...



ಡಿ. ಯೋಮಕೇಶ್ವರಪ್ಪ, ಅಧ್ಯಕ್ಷರು, ಯಲವಟ್ಟಿ. | ಶ್ರೀಮತಿ ನೀಲಮ್ಮ ಮಂಜಪ್ಪ, ಉಪಾಧ್ಯಕ್ಷರು, ಹೊಳೆಸಿರಿಗೆರೆ. | ಬಿ. ರಾಮಚಂದ್ರಪ್ಪ, ನಿರ್ದೇಶಕರು, ಬೆಳ್ಳೂಡಿ. | ಬಿ. ಶಂಭುಲಿಂಗಪ್ಪ, ನಿರ್ದೇಶಕರು, ಕುಂಬಳೂರು. | ಕೆ. ಶಿವಶಂಕ್ರಪ್ಪ, ನಿರ್ದೇಶಕರು, ಹೊಳೆಸಿರಿಗೆರೆ.



ಕೆ. ಮಂಜುನಾಥ್, ನಿರ್ದೇಶಕರು, ಹರಗನಹಳ್ಳಿ. | ಎಂ. ಪರಮೇಶ್ವರಪ್ಪ, ನಿರ್ದೇಶಕರು, ಹೊಳೆಸಿರಿಗೆರೆ. | ಹೆಚ್.ಬಿ. ನಾಗರಾಜ್, ನಿರ್ದೇಶಕರು, ಅಮರಾವತಿ. | ಜಿ.ಎನ್. ಚಂದ್ರಪ್ಪ, ನಿರ್ದೇಶಕರು, ಹರಿಹರ. | ಬಿ. ಸಿದ್ದೇಶ್, ನಿರ್ದೇಶಕರು, ಯಲವಟ್ಟಿ.



ಹೆಚ್.ಸಿ. ಉಮೇಶ್, ನಿರ್ದೇಶಕರು, ಕುಂಬಳೂರು. | ಹೆಚ್.ವಿ. ಚಂದ್ರಿಕಾ, ನಿರ್ದೇಶಕರು, ಕುಂಬಳೂರು. | ವಿ. ಬಸವರಾಜಪ್ಪ, ನಿರ್ದೇಶಕರು, ಹರಿಹರ. | ಎನ್.ಕೆ. ಪ್ರಕಾಶ್, ನಿರ್ದೇಶಕರು, ಬೆಳ್ಳೂಡಿ. | ಸಿದ್ದಪ್ಪಬೆಳ್ಳೂಡಿ, ನಿರ್ದೇಶಕರು, ಕುಂಬಳೂರು.

2023-24 ಸಾಲಿನಿಂದ 2027-28ನೇ ಸಾಲಿನವರೆಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಹಾಗೂ ಸಂಘದ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಅಭಿನಂದನೆಗಳು.

ಕಾರ್ಯದರ್ಶಿ ಮತ್ತು ಸಿಬ್ಬಂದಿ ವರ್ಗ



NEXA




ಪ್ರಥಮ ವಾರ್ಷಿಕೋತ್ಸವ

ಸಮಸ್ತ ಗ್ರಾಹಕರಿಗೆ ವರಮಹಾಲಕ್ಷ್ಮಿ ಹಬ್ಬದ ಶುಭಾಶಯಗಳು

ನಿಮ್ಮೆಲ್ಲರ ಸಹಕಾರದಿಂದ
ಶೃತಿ ಮೋಟಾರ್ಸ್ ಮಾರುತಿ ಸುಜ್ಜುಕಿ
ನೆಕ್ಸಾ ಶೋ ರೂಮ್
ಇಂದಿಗೆ ಯಶಸ್ವಿ 1 ವರ್ಷ ಪೂರೈಸಿದೆ.
ಉತ್ತಮ ಸೇವೆ, ಅತ್ಯುತ್ತಮ ಗುಣಮಟ್ಟ ಎಂಬ
ಧ್ಯೇಯದೊಂದಿಗೆ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ.
ಗ್ರಾಹಕರು ಎಂದಿನಂತೆ ಸಹಕಾರ ನೀಡಲು
ಕೋರುತ್ತೇವೆ.

ಶುಭ ಕೋರುವವರು:
ಶೃತಿ ಮೋಟಾರ್ಸ್ ಮಾಲೀಕರು ಮತ್ತು ಸಿಬ್ಬಂದಿ ವರ್ಗ

ಶ್ರುತಿ ಮೋಟಾರ್ಸ್ ಮಾರುತಿ ಸುಜ್ಜುಕಿ ನೆಕ್ಸಾ
323/1, ಹಳೇ ಪಿ.ಬಿ. ರಸ್ತೆ
ಆವರಗೆರೆ, ದಾವಣಗೆರೆ – 577003
ಸಂಪರ್ಕಿಸಿ: 9686017946